ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "1997ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1997ರ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ರಸ್ತೆ ಮತ್ತು ಸೇತುವೆಗಳನ್ನು ಮಾಡಿದಾಗ ಸರ್ಕಾರದವರು ಕಟ್ಟಿರುವಂತಹ ರಸ್ತೆ ಮತ್ತು ಸೇತುವೆಗಳಿಗೆ ಸುಂಕವನ್ನು ವಿಧಿಸುವಂತಹ ವ್ಯವಸ್ಥೆ ಇದೆ. ಇವತ್ತು ಖಾಸಗಿ ವ್ಯಕ್ತಿಗಳಿಂದ ರಸ್ತೆ ಮತ್ತು ಸೇತುವೆಗಳನ್ನು ಮಾಡಬೇಕೆಂಬ ಉದ್ದೇಶವನ್ನು ಹೊಂದಿರುವುದರಿಂದ ರಾಜ್ಯದಾದ್ಯಂತ ರಸ್ತೆ ಮತ್ತು

ಸೇತುವೆಗಳನ್ನು ನಿರ್ಮಾಣ ಮಾಡಿದಾಗ ಅದರ ಮೇಲೆ ಸುಂಕವನ್ನು ವಿಧಿಸಬೇಕೆಂಬ ಕಾರ್ಯಕ್ರಮವನ್ನು ಹಾಕಿರುವುದರಿಂದ ಖಾಸಗಿಯವರಿಗೂ ಅಧಿಕಾರ ದೊರೆಯಲಿ ಎಂಬ ಉದ್ದೇಶದಿಂದ ಈ ಕಾನೂನಿನಲ್ಲಿ ತಿದ್ದುಪಡಿಯನ್ನು ತಂದಿದೆ. ಈ ತಿದ್ದುಪಡಿಯನ್ನು ತರಬೇಕಾದಾಗ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಯಲ್ಲಿ ತಂದಿರುವ ತಿದ್ದುಪಡಿಯನ್ನೇ ಇಲ್ಲಿ ಜಾರಿಗೆ ತಂದಿದೆ. ಅಲ್ಲಿ ಕೇಂದ್ರ ಸರ್ಕಾರ ಎನ್ನುವ ಬದಲಾಗಿ ರಾಜ್ಯ ಸರ್ಕಾರ ಎಂದು ಇದೆಯೇ ಹೊರತು ಇದರಲ್ಲಿ ಬೇರೆ ಯಾವುದೇ ಬದಲಾವಣೆಗಳು ಇಲ್ಲದೆ ಇರುವುದರಿಂದ ಇದಕ್ಕೆ ಅನುಮೋದಿಸಬೇಕೆಂದು ತಮ್ಮಲ್ಲಿ ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದು ಸಿಂಪಲ್ ಅಮೆಂಡ್‌ಮೆಂಟ್ ಎಂಬುದು ಗೊತ್ತಿದೆ. ಆದರೆ ಲಾಸ್ಟ್ ಟೈಮ್ ನಲ್ಲೂ ಎಕ್ಸ್‌ಪ್ರೆಸ್ ಹೈವೆಯನ್ನು ಮಾಡುವಾಗ ಇದೇ ರೀತಿ ಸುಂಕವನ್ನು ವಿಧಿಸುವಂತಹ ಪ್ರಸ್ತಾವನೆಯೂ ಅದರಲ್ಲಿ ಇತ್ತು. ನಾವು ಎಷ್ಟೇ ಹೋರಾಟ ಮಾಡಿದರೂ ಅವರು ಹಠ ಹಿಡಿದಿದ್ದರಿಂದ ಆ ಬಿಲ್ ಪಾಸಾಯಿತು. ಆ ಮಾತು ಬೇರೆ ಹೊಸದಾಗಿ ನಿರ್ಮಾಣ ಮಾಡುವಂತಹ ರಸ್ತೆ ಮತ್ತು ಸೇತುವೆಗಳಿಗೆ ಸುಂಕವನ್ನು ಹಾಕುವುದನ್ನು ಮಾಡಿದರೆ ಅನೇಕ ಜಿಲ್ಲೆಗಳಲ್ಲಿಯೂ ಕೂಡ ಇದು ಹಾರ್ಟ್ ಬರ್ನಿಂಗ್ ಶುರುವಾಗುತ್ತದೆ. ನೀವು ಅದರ ಬಗ್ಗೆ ಯೋಚನೆ ಮಾಡಿ, ಜನ ಎಷ್ಟೊಂದು ತೆರಿಗೆಯನ್ನು ಕೊಡುವುದು. ಕರ್ನಾಟಕ ರಾಜ್ಯ ಅತ್ಯಂತ ಹೆಚ್ಚಿನ ತೆರಿಗೆಯನ್ನು ಕೊಡುವ ರಾಜ್ಯವಾಗಿದೆ.

1.20 ಪಿ.ಎಂ

ಪ್ರತಿಯೊಂದಕ್ಕೂ ಸೆಸ್, ಪ್ರತಿಯೊಂದಕ್ಕೂ ನೀವು ಎನ್‌ಹ್ಯಾನ್ಸ್‌ಮೆಂಟ್ ಮಾಡುತ್ತಿದ್ದೀರಿ.

ಅಧ್ಯಕ್ಷರು ; ನಾನು ತಮ್ಮಲ್ಲಿ ವಿನಂತಿಸುತ್ತೇನೆ, ನಾನು ಮಲೇಶಿಯಾಕ್ಕೆ ಕಾಮನ್‌ವೆಲ್ತ್ ಕಾನ್‌ಫರೆನ್ಸ್‌ಗೆ ಹೋಗಿದ್ದಾಗ ನೋಡಿದೆ. ಅವರೆಲ್ಲಾ ಈ ರೀತಿ ಮಾಡಿರುವುದರಿಂದ ಸ್ವಲ್ಪ ಸುಧಾರಣೆ ಮಾಡುವುದಕ್ಕೆ ಆಗಿದೆ. ಇಲ್ಲದೇ ಹೋದರೆ, ಈ ಶತಮಾನಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ, ಅವರು ಮಾಡುವುದಿಲ್ಲ. ಹೇಗೋ ಅಷ್ಟು ಕೊಡುತ್ತಾರೆ, ಹಣ ಬರುತ್ತದೆ, ಸುಧಾರಣೆ ಆಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಕಷ್ಟ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಇವತ್ತು ನಾವು ಆಂಧ್ರಕ್ಕೆ ಹೋಗಿ ನೋಡಿ. ಆಂಧ್ರದವರು ಎಷ್ಟು ಫ್ಲೈ ಓವರ್‌ಗಳನ್ನು ಮಾಡಿದ್ದಾರೆ. ವಿಮಾನ ನಿಲ್ದಾಣದ ಎದುರುಗಡೆ ಇರತಕ್ಕದ್ದು ಏನಿದೆ within two months, they covered nearly half a kilometre.

ಅಧ್ಯಕ್ಷರು : ಅವರಿಗೆ ಏನೋ ಒಂದು ಅದೃಷ್ಟ ಲಭಿಸಿತು. ಹಳೆಯ ಡಿಸ್‌ಪ್ಯೂಟ್ ಪೆಂಡಿಂಗ್ ಇದ್ದದ್ದು ಸುಮಾರು ನಿಜಾಮರ ಕಾಲದಿಂದಲೂ ಇದ್ದದ್ದು ಈಗ ಸರ್ಕಾರದಲ್ಲಿ ಇತ್ಯರ್ಥವಾಗಿ ಒಂದೇ ಸಾರಿ ಮೂರು ನೂರು ಕೋಟಿ ರೂಪಾಯಿ ಕಾಂಪನ್‌ಸೇಷನ್ ಬಂತು. ಅದರಲ್ಲಿ ನೂರು ಕೋಟಿ ರೂಪಾಯಿಗಳನ್ನು ಹೈದರಾಬಾದ್ ಸಿಟಿಯನ್ನು ಡೆವಲಪ್ ಮಾಡುವುದಕ್ಕೆ ತೆಗಿದಿಟ್ಟರು. ಆದುದರಿಂದ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಯಿತು. ಇಲ್ಲದಿದ್ದರೆ ಅವರ ಹತ್ತಿರನೂ ದುಡ್ಡು ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಬಾರ್ಡ್‌ನಿಂದ ಕೂಡ ಅವರು ಹೆಚ್ಚಿಗೆ ಹಣ ತಂದಿದ್ದಾರೆ. ಅದು ಅವರಿಗೆ ಕೂಡ ಗೊತ್ತಿದೆ.

ಅಧ್ಯಕ್ಷರು : ಇದು ಲಾಂಗ್ ಓವರ್‌ಡ್ಯೂ, ನಮಗೆ ಡೆವಲಪ್ ಆಗಬೇಕು. ಅದಕ್ಕೋಸ್ಕರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೆವಿ ಟ್ಯಾಕ್ಸ್ ಏನಾಗುತ್ತದೆಂದರೆ, ಗುಲ್ಬರ್ಗಾದಿಂದ ಇಲ್ಲಿಗೆ ಬರಬೇಕಾದರೆ 7-8 ನೂರು ಕಿಲೋಮೀಟರ್ ಇರುತ್ತದೆ. ಅದರ ಮಧ್ಯದಲ್ಲಿ ಪ್ರತಿಯೊಂದು ಕಡೆ 10-10 ಬ್ರಿಡ್ಜಸ್ ಎಕ್ಸ್‌ಪ್ಯಾನ್‌ಷನ್ ಮಾಡಿ ಕನ್‌ಸ್ಟ್ರಕ್ಷನ್ ಮಾಡಿ ಹತ್ತುತ್ತು ಕಡೆ ನೀವು ಟ್ಯಾಕ್ಸ್ ಕಲಕ್ಟ್ ಮಾಡಿಕೊಳ್ಳುತ್ತಾ ಹೋದರೆ, ಪ್ರತಿಯೊಂದು ಬ್ರಿಡ್ಜ್ ಮೇಲೆ ವಾಹನಗಳನ್ನು ನಿಲ್ಲಿಸಿ ಎಷ್ಟು ತೊಂದರೆಯಾಗುತ್ತದೆಂಬುದನ್ನು ಯೋಚನೆ ಮಾಡಿ. ಒಂದೇ ಕಡೆಯಾದರೆ ಅಡ್ಡಿಯಿಲ್ಲ. ಹೊಸ ಸೇತುವೆಗಳು ಎಲ್ಲೆಲ್ಲಿವೆ ಅಲ್ಲಿ ಎಲ್ಲಾ ಕಡೆ ನಿಲ್ಲಿಸಿಕೊಂಡು ಹೋದರೆ ಎಲ್ಲಾ ಕಡೆ ಟ್ಯಾಕ್ಸ್ ಆಗುತ್ತದೆ.

ಅಧ್ಯಕ್ಷರು : ಅವರು ಇಷ್ಟಿಷ್ಟು ಪಾಯಿಂಟ್ ಎಂದು ಇಟ್ಟುಕೊಂಡಿರುತ್ತಾರೆ. ಎಲ್ಲಾ ಕಡೆ ಮಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಹೇಳಬೇಕಾಗುತ್ತದೆ. ಆದರೆ ಅವರ ಹತ್ತಿರ ವಿವರಗಳು ಇಲ್ಲ. ಹಾಗಾಗಿ ಜನರಲ್ ಆಗಿ ಹೇಳಿದರು.

ಶ್ರೀ ಸಿ.ಎಂ. ಉದಾಸಿ : ಸೇತುವೆ ಮತ್ತು ರಸ್ತೆಗಳ ನಿರ್ಮಾಣ ಮಾಡಬೇಕಾದಾಗ ವಾಹನ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲೆಲ್ಲಿ ಅತ್ಯಂತ ಅವಶ್ಯಕವಾಗಿದೆ ಎಂಬುದು ಬಂದಾಗ...

ಅಧ್ಯಕ್ಷರು : ಯಾವಾಗಲೂ ಕೂಡ ಅವರು ಏನು ವಿಚಾರ ಹೇಳುತ್ತಾರೆಂದು ಗಮನಿಸಿ ತಾವು ಉತ್ತರ ಕೊಟ್ಟರೆ ನನ್ನ ಕೆಲಸ ಸುಲಭವಾಗುತ್ತದೆ. ನಾನು ಮಾತನಾಡುವುದು ಕಡಿಮೆಯಾಗುತ್ತದೆ. ನಿಮಗೆ ಆ ತರಹ ಆಗದೇ ಇದ್ದಾಗ ನಾನು ಮಧ್ಯೆ ಮಾತನಾಡಬೇಕಾಗುತ್ತದೆ. ಅವರು ಏನು ಹೇಳುತ್ತಾರೆಂದರೆ ಒಂದು ರಸ್ತೆಯಲ್ಲಿ ಬಂದಿರತಕ್ಕ 10 ಸೇತುವೆಗೆ ಕೊಡಬೇಕಾದ ಸಂದರ್ಭ ಬರುತ್ತದೆ. ಹತ್ತು ಕಡೆ ನೀವು ಟ್ಯಾಕ್ಸ್ ವಸೂಲ್ಮಾಡುತ್ತೀರಾ ಎಂದು ಕೇಳುತ್ತಾರೆ. ನನಗೆ ತಿಳಿದ ಹಾಗೆ, ಹಾಗೆ ಮಾಡುವುದಿಲ್ಲ. ಧಾರವಾಡದಿಂದ ಬರತಕ್ಕ ರಸ್ತೆಯಲ್ಲಿ ಮಾಡುತ್ತಿದ್ದಾರೆಂದು ಇಟ್ಟುಕೊಳ್ಳಿ. ಧಾರವಾಡದಿಂದ ಉದ್ದಕ್ಕೆ ಎಲ್ಲೆಲ್ಲಿ ಸೇತುವೆ ಬರುತ್ತದೆ ಅಲ್ಲಿ ಎಲ್ಲಾ ಮಾಡುವುದಿಲ್ಲ. ದಾವಣಗೆರೆಯಿಂದ ಹರಿಹರಕ್ಕೆ ಬಂದಾಗ ಎಲ್ಲೋ ಒಂದು ಕಡೆ ಟರ್ನಿಂಗ್ ತೆಗೆದುಕೊಳ್ಳುತ್ತಾರೆ. ಅಲ್ಲಿ ಮತ್ತೆ ಒಂದು ಪಾಯಿಂಟ್ ಹೋಗುತ್ತದೆ. ಇಲ್ಲಿ ದಾವಣಗೆರೆಯವರೆಗೆ ಎಲ್ಲಿಯೂ ಇರುವುದಿಲ್ಲ. ಈ ತರಹ ಮಾಡಬಹುದೆಂದು ಕಾಣುತ್ತದೆ.

ಶ್ರೀ ಸಿ.ಎಂ. ಉದಾಸಿ : ಆ ರೀತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. 7-8 ನೂರು ಕಿಲೋಮೀಟರ್ ಇದ್ದಾಗ ಅವರು ಹೇಳಿದ ಹಾಗೆ ಗುಲ್ಬರ್ಗಾದಿಂದ ಬೆಂಗಳೂರಿಗೆ ಬರುವವರೆಗೆ 10-12 ಸೇತುವೆಗಳು ಆಗುತ್ತವೆ.

ಅಧ್ಯಕ್ಷರು : ಇದು ಒಂದೇ ಕಡೆ ಅಲ್ಲ. ಎಲ್ಲೆಲ್ಲಿ ಎಕ್ಸಿಸ್ಟ್ ಎಂದು ಹಾಕಿ ಕೊಳ್ಳುತ್ತಾರೆ ಅವರು ಅಂಥ ಕಡೆ.

ಶ್ರೀ ಸಿ.ಎಂ. ಉದಾಸಿ : ಆ ರೀತಿ ಆಗುವುದಕ್ಕೆ ಕಾರಣಗಳು ಇಲ್ಲ. ಎಲ್ಲಿ ಅತ್ಯಂತ ಅವಶ್ಯಕವಾಗಿದೆ ಎಂಬ ಭಾವನೆ ಇದೆ, ಅದಕ್ಕೆ ಇವತ್ತು ಖಾಸಗಿ ವ್ಯಕ್ತಿಗಳು ಮುಂದೆ ಬಂದಾಗ ಮಾತ್ರ ಇದನ್ನು ಮಾಡುವುದಕ್ಕೆ ಇಚ್ಛಿಪಡುತ್ತಾರೆಯೇ ಹೊರತು ಸರ್ಕಾರ ಈ ರೀತಿ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹತ್ತು ಜನ ಖಾಸಗಿ ವ್ಯಕ್ತಿಗಳಿಗೆ ಕೊಡುತ್ತೀರಿ. you will give to the entrepreneurs. 10 bridges will come in 800 kms., Naturally all enterpreneurs will fix their own rates or whatever minimum you fix.

ಶ್ರೀ ಸಿ.ಎಂ. ಉದಾಸಿ : ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರಿಗೆ ಎಲ್ಲಿ ಕೊಡುತ್ತಾರೆ ದುಡ್ಡು? ಒಬ್ಬನೇ ಸಂಗ್ರಹ ಮಾಡಿ ಎಲ್ಲರಿಗೆ ಕೊಡುತ್ತಾರೆಯೇ?

ಶ್ರೀ ಸಿ.ಎಂ. ಉದಾಸಿ : ಅದು ಆಗುವುದಿಲ್ಲ. ಬೆಂಗಳೂರು-ಮೈಸೂರು ಬೈಪಾಸ್ ಪ್ರಶ್ನೆ ಬಂದಾಗ, ಹುಬ್ಬಳ್ಳಿ-ಧಾರವಾಡ ಬೈಪಾಸ್ ಪ್ರಶ್ನೆ ಬಂದಾಗ ಇದು ಬರುತ್ತದೆ. ಹುಬ್ಬಳ್ಳಿ-ಧಾರವಾಡ ಬೈಪಾಸ್‌ನಲ್ಲಿ ಮಾತ್ರ ಇದನ್ನು ಮುಗಿಸಬೇಕಾಗುತ್ತದೆಯೇ ಹೊರತು ಉಳಿದೆಲ್ಲಾ ಕಡೆ ಮುಗಿಸುವುದಕ್ಕಾಗುವುದಿಲ್ಲ. ಎಲ್ಲಾ ಕಡೆ ಸಂಪೂರ್ಣವಾಗಿ ಮಾಡಬೇಕೆಂಬ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ಒಬ್ಬ ಎಂಟರ್‌ಪ್ರಿನ್ಯೂರ್ ಇದ್ದರೆ ಬರುತ್ತದೆ.

ಶ್ರೀ ಸಿ.ಎಂ. ಉದಾಸಿ : ಅದನ್ನು ಕ್ಲಬ್ ಮಾಡಿಕೊಡಬೇಕಾಗುತ್ತದೆ. ನಾಲ್ಕು ಸೇತುವೆಗಳು ಇದ್ದಾಗ ಕ್ಲಬ್ ಮಾಡಿಕೊಡಬೇಕಾಗುತ್ತದೆ. ಆ ರೀತಿ ನಾಲ್ಕು ಸೇತುವೆಗಳ ಮೇಲೆ ಸುಂಕ ವಸೂಲ್ಮಾಡುವ ಪ್ರಸಂಗ ಬರುವುದಿಲ್ಲ. ಬಹಳ ಕಡೆ ಅಭಿವೃದ್ಧಿ ಆಗಬೇಕಾದಾಗ ಬೇರೆ ದೇಶಗಳನ್ನು ಗಮನದಲ್ಲಿಟ್ಟುಕೊಂಡದ್ದೇ ಆದರೆ ಶೇಕಡ 60ರಷ್ಟು ಸುಂಕದ ರಸ್ತೆಗಳನ್ನು ಮಾಡಿ ಆಗಿದೆ. ಇವತ್ತು ನಮಗೆ ಇರತಕ್ಕ ಹಣಕಾಸಿನ ಲಭ್ಯತೆ ಮೇಲೆ ಸಂಪೂರ್ಣವಾಗಿ ಎಲ್ಲಾ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ರೀತಿ ಎಂಟರ್‌ಪ್ರಿನ್ಯೂರ್ಸ್ ಬರಬೇಕಾದಾಗ ಅವರಿಗೆ ರಕ್ಷಣೆ ಸಿಗುವ ಸಲುವಾಗಿ ಕಾನೂನಿನಲ್ಲಿ ಈ ತಿದ್ದುಪಡಿ ಅತ್ಯಂತ ಅವಶ್ಯ ಇದೆ. ರಾಷ್ಟ್ರೀಯ ಹೆದ್ದಾರಿಗಾಗಿ ಈಗಾಗಲೇ ಕೇಂದ್ರ ಸರ್ಕಾರದವರು ಇದೇ ರೀತಿ ತಿದ್ದುಪಡಿಯನ್ನು ತಂದಿದ್ದನ್ನೂ ಸಹ ತಮ್ಮ ಗಮನಕ್ಕೆ ತಂದಿದ್ದೇನೆ. ಆ ರೀತಿ ಇರುವುದರಿಂದ ದಯವಿಟ್ಟು ಇದಕ್ಕೆ ಒಪ್ಪಿಗೆಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಸರಿಯಾಗಿ ಆಕ್ಟ್ ನೋಡಿಕೊಂಡಿಲ್ಲವೆಂದು ಕಾಣುತ್ತದೆ. ತಾವು 19(ಎ) ಓದಿದರೆ ಗೊತ್ತಾಗುತ್ತದೆ."19A : Power of the State Government to enter into agreement for development and maintenance of Highways -(1) Notwithstanding anything contained in this Act, the state Government may enter into an agreement with any person in relation to the development and

maintenance of the whole or any part of highway" ಅಂದಾಗ ನೀವು ಇಬ್ಬರೂ ಮೂವರು ಎಂಟರ್‌ಪ್ರಿನ್ಯೂರ್ಸ್ ಇದ್ದಲ್ಲಿ ಬೇರೆ ಬೇರೆಯವರಿಗೆ ಎಂಗೇಜ್ ಮಾಡಿದಾಗ ಯಾವ ರೀತಿಯಲ್ಲಿ ಮಾಡುತ್ತೀರಿ? ಒಂದು ಕಡೆ ಎಂಟ್ರಿಪಾಯಿಂಟ್ ಮಾಡಿ ಮೂವರಿಗೆ ಡಿಸ್ಟ್ರಿಬ್ಯೂಟ್ ಮಾಡುತ್ತೀರಾ ಅಥವಾ ಏನು ಎಂಬುದು ಬೇಕಲ್ಲಾ. ಎರಡನೆಯದಾಗಿ ಫೆನಾಲ್ಟಿ ಹೇಗೆ ಮಾಡಿದ್ದೀರೆಂದರೆ ಫನಿಷ್‌ಮೆಂಟ್ ಕೊಡುವುದು. 19(ಬಿ) ಇದು ನಮಗಿಂತ ಜಾಸ್ತಿ ಶ್ರೀ ವಾಟಾಳ್‌ನಾಗರಾಜ್ ಅವರಿಗೇ ಬೀಳುತ್ತದೆ.

ಅಧ್ಯಕ್ಷರು : ಅಷ್ಟು ಹೇಳಿದರೆ, ನೀವು ಉಳಿದದ್ದು ಇನ್ನೂ ಹೇಳಬೇಕಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, Whoever commits mischief by doing any act which renders or which he knows to be likely to render any highway referred to in sub-section (1) of Section 19A impassable or less safe for travelling or conveying property shall be punished with imprisonment of either description for a term which may extend to five years or with a fine or with both". ಈಗ ಪಿಕೆಟಿಂಗ್ ಮಾಡುತ್ತಾರೆ. ರಸ್ತೆ ರೋಖೋ ಮಾಡುತ್ತಾರೆ. ತಮಗೆಲ್ಲಾ ಗೊತ್ತಿದೆ. ಪ್ರಜಾಪ್ರಭುತ್ವದಲ್ಲಿ ಅನೇಕ ಮೆಷರ್ಸ್ ಅನ್ನು ಚೆನ್ನಾಗಿ ಉಪಯೋಗ ಮಾಡಿಕೊಂಡು ಮಾಡುತ್ತಾರೆ. ಎಲ್ಲಾ ಪಕ್ಷದವರು ಮಾಡಿದ್ದಾರೆ. ಈ ದೇಶದಲ್ಲಿ ರೈಲ್ವೆಗೆ ಬಾಂಬ್ ಇಡುವಾಗ ಪಿಕೆಟಿಂಗ್ ಮಾಡುವವರು, ರಸ್ತೆ ರೋಖೋ ಮಾಡುವವರು ಸಾಕಷ್ಟು ವಿದ್ಯಾರ್ಥಿಗಳು ಮಾಡುತ್ತಾರೆ. ರಾಜಕೀಯ ಪಕ್ಷದವರು ಮಾಡುತ್ತಾರೆ, ಎಲ್ಲರೂ ಕೂಡ ಮಾಡುತ್ತಾರೆ. ಅವರಿಗೆ ಏಕ್‌ದಂ 5 ವರ್ಷ ಸಜೆ ಎಂದರೆ ಇದು ಸ್ವಲ್ಪ ಜಾಸ್ತಿ ಆಯಿತು. ಎರಡನೆಯದಾಗಿ, ಮೆತಡ್ ಆಫ್ ಟ್ಯಾಕ್ಸೇಷನ್ ಬಗ್ಗೆ ತಾವು ಎಕ್ಸ್‌ಪ್ಲೈನ್ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಹಾಗೆ ಇದೆ, ರಾಜ್ಯ ಸರ್ಕಾರದಲ್ಲಿ ಹೀಗೆ ಇದೆ ಎಂದು ಹೇಳಿದರು. ಅದನ್ನೂ ಕೂಡ ಹೇಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಸುಮಾರು ಮುಕ್ಕಾಲು ಭಾಗ ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಓದಿರಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ ಸಾಕಷ್ಟು ಹೋರಾಟ ಮಾಡಿಕೊಂಡು ಬಂದು ತಾವು ಮಂತ್ರಿಗಳಾಗಿರುವುದು ಎಂದು ನಿಮಗೆ ಗೊತ್ತು, ರಾಜ್ಯಕ್ಕೆ ನಿಮ್ಮ ಕ್ಷೇತ್ರದ ಜನರಿಗೆ ಖಂಡಿತ ಗೊತ್ತು. ಇಂಥ ಸಂದರ್ಭದಲ್ಲಿ ಸುರಕ್ಷತೆ ಮಾಡುವ ದೃಷ್ಟಿಯಿಂದ, ದುಷ್ಕೃತ್ಯ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ 5 ವರ್ಷಗಳವರೆಗಿನ ಅವಧಿಯಲ್ಲಿ ಯಾವುದೇ ಸ್ವರೂಪದ ಕಾರಾಗೃಹ ವಾಸದಿಂದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು. ಇದು ನಿಜಕ್ಕೂ ನಿಮ್ಮ ಮನಸಾರ ತಂದಿರತಕ್ಕ ತಿದ್ದುಪಡಿಯೋ ಅಥವಾ ಏನೋ ಇರಲಿ, ವಿರೋಧ ಪಕ್ಷದವರು ವಿರೋಧ ಮಾಡುತ್ತಾರೆ. ಆಮೇಲೆ ತಿದ್ದುಪಡಿ ಮಾಡಬೇಕೆಂದು ಯೋಚನೆ ಮಾಡಿದ್ದೀರೋ ಏನೋ ನನಗೆ ಅರ್ಥವಾಗುವುದಿಲ್ಲ. ನಾವು ಪ್ರಜಾಪ್ರಭುತ್ವದಲ್ಲಿದ್ದೇವೋ ಅಥವಾ ಎಲ್ಲಿದ್ದೇವೋ ಎಂದು ಅನ್ನಿಸುತ್ತದೆ. ರಸ್ತೆ ರೋಖೋ ಮಾಡುವ ಸಂದರ್ಭದಲ್ಲಿ 5 ವರ್ಷ ಕಾರಾಗೃಹವಾಸ ಜುಲ್ಮಾನೆ ಎರಡೂ ದಂಡ ಎಂಬ ಸ್ಥಿತಿ ತಂದರೆ ಖಂಡಿತ ಪ್ರಜಾಪ್ರಭುತ್ವಕ್ಕೆ ವಿರೋಧ ಮಾಡುವ ತಿದ್ದುಪಡಿ

ಅನ್ನಿಸುತ್ತದೆ. ಖಂಡಿತ ಈ ದಿಕ್ಕಿನಲ್ಲಿ ಶಿಕ್ಷೆ ಇರುವ ಸಂದರ್ಭದಲ್ಲಿ ಈ ತಿದ್ದುಪಡಿ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದು ಬಿಟ್ಟು ಬೇರೆ ದಾರಿ ಇಲ್ಲ. ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಸೆಕ್ಷನ್ 19(ಬಿ) ಬಗ್ಗೆ ಈಗಾಗಲೇ ಹೇಳಿದ್ದಾರೆ. ಅದಕ್ಕೆ ಹಿಂದೆ ತಂದಾಗ 5 ಸಾವಿರ ರೂಪಾಯಿ ದಂಡ ಎಂದು ನಿರ್ದಿಷ್ಟವಾಗಿ ಹೇಳಿದ್ದೀರಿ. ಆದರೆ ನಿರ್ದಿಷ್ಟವಾಗಿ 5 ಸಾವಿರ ಎಂದು ಇದರಲ್ಲಿ ಹೇಳಿಲ್ಲ. ಈ ಕಾರಣದಿಂದ ನಾವು ಈ ಬಿಲ್ಲನ್ನು ಹಿಂದೆ ತಂದಾಗ ಇದನ್ನು ವಾಪಸ್ಸು ಕಳುಹಿಸಿದ್ದೆವು. ಆದ್ದರಿಂದ ದಯವಿಟ್ಟು ಸೆಕ್ಷನ್ 19(ಬಿ) ಅನ್ನು ಸಂಪೂರ್ಣವಾಗಿ ಇದರಿಂದ ತೆಗೆಯಬೇಕು. ಇಲ್ಲದಿದ್ದರೆ ನಾವು ಖಂಡಿತ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನೀವು ದಾರಿ ಸುಗಮಗೊಳಿಸಬೇಕು. ಮಾನ್ಯ ಉದಾಸಿಯವರೇನು ಖಾಯಂ ಆಗಿ ಇಲ್ಲೇ ಇರುವುದಿಲ್ಲ. ನಾಳೆ ದಿವಸ ಮಂತ್ರಿ ಪದವಿ ಕಳೆದುಕೊಂಡು ಸರ್ಕಾರದ ವಿರುದ್ಧ ಹೋರಾಟ ಮಾಡಬೇಕೆಂದು ಹಾನಗಲ್ ರಸ್ತೆಯಲ್ಲಿ ಧರಣಿ ಕುಳಿತರೆ ನಿಮ್ಮನ್ನು ತೆಗೆದುಕೊಂಡು ಹೋಗಿ 5 ವರ್ಷ ಜೈಲಿಗೆ ಹಾಕಿದರೆ ಏನು ಗತಿ? ಜೈಲಿಗೆ ಹಾಕಿದವನು ಮಂತ್ರಿಯಾಗಬಾರದೆಂದು ಕಾನೂನು ಇದೆ. ಶಿಕ್ಷೆಗೆ ಒಳಪಟ್ಟವರು ಮಂತ್ರಿಯಾಗಬಾರದೆಂದು ಕಾನೂನು ಇದೆ. ಆಗ ಏನು ಮಾಡುತ್ತೀರಿ ನೀವು? ಇದನ್ನು ಸ್ವಲ್ಪ ಆಲೋಚನೆ ಮಾಡಿನೋಡಿ. ನೀವು ಪ್ರಜಾಪ್ರಭುತ್ವ ದೇಶದಲ್ಲಿರತಕ್ಕವರು. ನೀವು ಹೇಳುತ್ತಿದ್ದುದು ನನಗೆ ಗೊತ್ತು. ಇದನ್ನು ಕೇಂದ್ರ ಸರ್ಕಾರ ತಂದಿದೆ, ನಮ್ಮದು ಏನೂ ಸೇರಿಸಿಲ್ಲವೆಂದು ಹೇಳುತ್ತಿದ್ದಿರಿ. ನೀವು ಇದನ್ನು ಸೇರಿಸಬೇಡಿ, ಇದು ಕರ್ನಾಟಕ ರಾಜ್ಯದ ಬಿಲ್. ಕೇಂದ್ರ ಸರ್ಕಾರದ ಬಿಲ್ ಅಲ್ಲ. ಹಾಗಾಗಿ ಇದನ್ನು ಸಂಪೂರ್ಣವಾಗಿ ತೆಗೆಯಬೇಕು. ಇದನ್ನು ಖಾಸಗಿಯವರಿಗೆ ವಹಿಸತಕ್ಕದ್ದು ಎಂದು ಹೇಳುತ್ತೀರಿ. ಖಾಸಗಿಯವರಿಗೆ ವಹಿಸಿದರೆ ಸೇತುವೆ ನಿರ್ಮಾಣ ಮಾಡಕ್ಕದ್ದು, ಸುಂಕ ಏನಿದೆ ಅದನ್ನು ನೀವೇ ವಸೂಲ್ಮಾಡಿಕೊಳ್ಳುವುದು ಅಂದರೆ ನೀವು ಹೆದ್ದಾರಿಯಲ್ಲಿ ಅಂಗಡಿ ಇಟ್ಟ ಹಾಗೆ. ಅಂಗಡಿ ತೆಗೆದಿದ್ದರೆ ಕೊಂಡು ಕೊಂಡು ಹೋಗಬಹುದೆಂದು, ಆದರೆ ಆ ಪರಿಸ್ಥಿತಿ ಇಲ್ಲ, ದಯವಿಟ್ಟು ಇದನ್ನು ತರಬೇಡಿ. ಮಾನ್ಯ ಉದಾಸಿಯವರ ಕಾಲದಲ್ಲಿ ಇಂಥ ಮಸೂದೆಯನ್ನು ತರಬೇಡಿ. ಬೇಕಾದರೆ ಸಾಲ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ವಿಶ್ವಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿರಿ. ನೀವು ಸಾಲ ಮಾಡಿ, ರೋಡ್ ಮಾಡಿ ಈ ದೇಶವೇ ಸಾಲದಲ್ಲಿ ಮುಳುಗಿ ಹೋಗಿದೆ ಆದ್ದರಿಂದ ನೀವೂ ಒಂದಿಷ್ಟು ಸಾಲ ಮಾಡಿ ರಸ್ತೆ ಮಾಡಿ. ಆದರೆ ಖಾಸಗಿಯವರಿಗೆ ಕೊಟ್ಟುಬಿಟ್ಟು ದಯವಿಟ್ಟು ಇದ್ದದನ್ನೂ ಹಾಳು ಮಾಡಬೇಡಿ. ಸೆಕ್ಷನ್ 19 ಬಿ ಯನ್ನು ಸಂಪೂರ್ಣವಾಗಿ ವಾಪಸ್ಸು ಪಡೆಯಬೇಕು ಎಂದು ಹೇಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ರೋಡ್‌ಗೋಸ್ಕರ ಟ್ಯಾಕ್ಸ್ ತೆಗೆದುಕೊಳ್ಳುವಂಥಾದ್ದು ಅಂದರೆ ಮೋಟಾರ್ ವೆಹಿಕಲ್ ಟ್ಯಾಕ್ಸ್ ಇದೆ. ಅದರಲ್ಲಿ ಒಂದು ಕಡೆ ಟ್ಯಾಕ್ಸ್ ತೆಗೆದುಕೊಳ್ಳುತ್ತೀರಿ. ಈಗ ಮತ್ತೆ ಟ್ಯಾಕ್ಸ್ ಹಾಕಿದರೆ ಅದು ಡಬಲ್ ಟ್ಯಾಕ್ಷೇಷನ್ ಆಗುವುದಿಲ್ಲವೇ? ಇದನ್ನು ನೀವು ಹೇಗೆ ಹಾಕುತ್ತೀರಿ? ಮತ್ತು ಸೆಕ್ಷನ್ 19(ಬಿ)ಯಲ್ಲಿ ಹಾಕಿರುವುದು ನಿಲ್ಲುವುದಿಲ್ಲ. ನೀವು ಖಾಸಗಿಯವರ ಜೊತೆ ಅಗ್ರಿಮೆಂಟ್ ಮಾಡಿಕೊಂಡಾಗ

ಪನಿಷ್‌ಮೆಂಟ್ ಕೊಡುವುದಕ್ಕೆ ಯಾರು ಕಂಪ್ಲೆನೆಂಟ್ ಆಗುತ್ತಾರೆ. ರಾಜ್ಯವೇ ಅಥವಾ ಖಾಸಗೀ ವ್ಯಕ್ತಿಯೇ? ನೀವು ಕಾಗೆನಿಸಬಲ್ ಅಫೆನ್ಸ್ ಮಾಡಿದ್ದೀರಾ? ಪ್ರತಿ ದಿವಸವೂ ಟ್ರಾವೆಲ್ ಮಾಡತಕ್ಕಂಥವರು ಇರುತ್ತಾರೆ. ದಾರಿಯಲ್ಲಿ ನ್ಯೂಸೆನ್ಸ್ ಮಾಡೇ ಮಾಡುತ್ತಾರೆ. ಏಕೆಂದರೆ ಟ್ರಾವೆಲ್ ಮಾಡತಕ್ಕಂಥ ದಾರಿಯಲ್ಲಿ ಎಲ್ಲೂ ಟಾಯ್ಲೆಟ್‌ಗಳು ಇಲ್ಲವೇ ಇಲ್ಲ. ದಾರಿಯಲ್ಲಿ ಹೋಗುವವರು ಮಧ್ಯೆ ಮಕ್ಕಳನ್ನು ಇಳಿಸಿ ಏನಾದರೂ ಮಾಡಿಸಿದರೆ ಅದನ್ನು ಕೂಡ ನೀವು ಮಿಸ್‌ಚೀಫ್ ಎಂದು ಹೇಳುತ್ತೀರಾ?

ಅಧ್ಯಕ್ಷರು : ತಾವು ಮತ್ತು ಶ್ರೀರಾಮರೆಡ್ಡಿಯವರು ಹೇಳಿದಂಥ ಆಸ್ಪೆಕ್ಟ್‌ಗಳನ್ನು ಯೋಚನೆ ಮಾಡೋಣ. ಆದರೆ ಒಂದು ವಿಷಯವನ್ನು ಯೋಚನೆ ಮಾಡಿ. ನಾವು ಲೋಕೋಪಯೋಗಿ ಇಲಾಖೆಗೆ ಕೊಡತಕ್ಕಂಥ ಹಣ ಸಂಬಳ ಸಾರಿಗೆಗಳಿಗೆ ಸರಿಯಾಗುತ್ತದೆ. ಒಂದು ಕಿ.ಮೀ. ರಸ್ತೆಯನ್ನು ಆಸ್ಫಾಲ್ಟ್ ಮಾಡುವುದಕ್ಕೆ ಆಗಿಲ್ಲ ಮೆಟಲಿಂಗ್ ಮಾಡುವುದಕ್ಕೆ ಕೂಡ ಇದರಿಂದ ಆಗುತ್ತಿಲ್ಲ. ಓವರ್‌ಹೆಡ್ಸ್ ಜಾಸ್ತಿ ಖರ್ಚು ಬರುತ್ತಿದೆ. ನೀವು ದೂರ ಹೋಗಿ ಹಳ್ಳಿಗಳ ರಸ್ತೆಗಳ ಪರಿಸ್ಥಿತಿಯನ್ನು ನೋಡಬೇಕು. ಇನ್ನೂ ಒಂದು ಶತಮಾನ ಕಾಲಾವಕಾಶ ಕೊಟ್ಟರೂ ಕೂಡ ಈಗಿರತಕ್ಕ ವ್ಯವಸ್ಥೆಯಲ್ಲಿ ಅಭಿವೃದ್ಧಿ ಮಾಡಲು ಆಗುವುದಿಲ್ಲ. ನಾವು ಮಾಡುತ್ತೇವೆ ಎಂದು ಬರುವಂಥ ಖಾಸಗಿಯವರು ಶ್ರದ್ಧೆಯಿಂದ ಮಾಡುತ್ತಾರೆ. ಇಷ್ಟು ದುಬಾರಿಯಾಗುವುದಿಲ್ಲ. ಅದಕ್ಕೆ ಒಂದಿಷ್ಟು ಸುಂಕ ಕೊಡಲು ಆಗುವುದಿಲ್ಲವೇ? 1960ರ ದಶಕದಲ್ಲಿ ನಮ್ಮ ಭಾರತ ದೇಶದಿಂದ ನೆರವು ತೆಗೆದುಕೊಳ್ಳುತ್ತಿದ್ದಂಥ ಮಲೇಷಿಯಾ ದೇಶದಲ್ಲಿ ಇವತ್ತು ಇಡೀ ವಿಶ್ವದಲ್ಲೇ ಚೆನ್ನಾಗಿರತಕ್ಕಂಥ ರಸ್ತೆಗಳನ್ನು ಮಾಡಿದ್ದಾರೆ. ಮತ್ತು ಅಲ್ಲಿ ಇರುವುದು ರಾಜರು. ಇಲ್ಲಿ ಪಾರ್ಲಿಮೆಂಟನ್ನು ಇಟ್ಟುಕೊಂಡರೂ ಕೂಡ ನಮ್ಮ ಪರಿಸ್ಥಿತಿ ಹೀಗೆ ಇದೆ. Through king, they are administering. It is a Islamic country. ಅಷ್ಟು ಲಿಬರಲೈಸ್ ಮಾಡಿಕೊಂಡು ಎಷ್ಟು ಚೆನ್ನಾಗಿ ಕೌಲಾಲಂಪುರದಲ್ಲಿ ಮಾಡಿದ್ದಾರೆ ಎನ್ನುವುದನ್ನು ತಾವು ಹೋಗಿ ನೋಡಿಕೊಂಡು ಬರಬೇಕು.

ಶ್ರೀಮತಿ ಪ್ರಮೀಳ ನೇಸರ್ಗಿ : ಅಧ್ಯಕ್ಷರೇ, ತಾವು ಕರೆದುಕೊಂಡು ಹೋದರೆ ನಾವು ಬರುತ್ತೇನೆ. ಅದನ್ನೂ ನೋಡೋಣ. ಅಷ್ಟು ಚೆನ್ನಾಗಿ ಇದ್ದರೆ, ನಾವು ನೋಡಿಕೊಂಡು ಬಂದ ಮೇಲೆ ಬೇಕಾದರೆ ಕಾನೂನು ಮಾಡೋಣ.

ಅಧ್ಯಕ್ಷರು : ಅದಕ್ಕೆ ವ್ಯವಸ್ಥೆ ಮಾಡೋಣ. ನನಗೆ ದುಃಖವಾಗುವುದು ಏನೆಂದರೆ ನಮ್ಮದು ಇಷ್ಟು ದೊಡ್ಡ ದೇಶ, ಇಷ್ಟು ದೊಡ್ಡ ಸಂಪನ್ಮೂಲಗಳು ಮತ್ತು ಇಷ್ಟು ಮಾನವ ಶಕ್ತಿಗಳೆಲ್ಲಾ ಇದ್ದರೂ ನಾವು ಒಂದು ರಸ್ತೆ ಮಾಡಿಕೊಳ್ಳಲು ಆಗುವುದಿಲ್ಲ ಎಂದರೆ, I don't want to say anything which would bring disrepute to our Engineers. ಆದರೆ ನೀವು ನಮ್ಮ ರಸ್ತೆಗಳು ಹೇಗಿವೆ ಎನ್ನುವುದನ್ನು ಯೋಚನೆ ಮಾಡಿ. ಖಾಸಗಿಯವರಿಗೆ ಕೊಡಬೇಡಿ ಎಂದು ರೆಡ್ಡಿಯವರು ಹೇಳಿದರು. ಅವರಿಗೆ ಕೊಡದೆ ಮತ್ಯಾರಿಗೆ ಕೊಡಬೇಕು? ಇದನ್ನು ಮಾಡುವವರು ಯಾರು ಹೇಳಿ.

ಶ್ರೀಮತಿ ಪ್ರಮೀಳ ನೇಸರ್ಗಿ : ನಮ್ಮ ಇಂಜಿನಿಯರುಗಳಿಗೆ ಅಷ್ಟೂ ಮಾಡಲು ಶಕ್ತಿ ಇಲ್ಲವೇ? ಅಂದರೆ ಅವರು ಇದರಲ್ಲಿ ವಿಫಲರಾಗಿದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಈಗಿರುವ ವ್ಯವಸ್ಥೆಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ತಾವು ಮೈಸೂರು ರಾಜ್ಯದಲ್ಲಿ ಹೋಗಿ ನೋಡಿ. ಮಹಾರಾಜರ ಕಾಲದಲ್ಲಿ ಆಗಿರತಕ್ಕಂಥ ರಸ್ತೆಗಳ ಕೆಲಸದಲ್ಲಿ ಅಲ್ಲಲ್ಲಿ ಕಾಂಕ್ರೀಟ್ ಹಾಕಿರತಕ್ಕಂಥ ಸ್ವಲ್ಪ ಪ್ಯಾಚ್ ಇದೆ. ಅದನ್ನು ನೋಡಿ. ಅನಂತರ ನಾವು ಸ್ವತಂತ್ರರಾದ ಮೇಲೆ, ಸಾರ್ವಭೌಮರಾದಮೇಲೆ ನಾವು ಮಾಡಿರತಕ್ಕಂಥ ಕೆಲಸವನ್ನೂ ತಾವು ದಯಮಾಡಿ ನೋಡಿ. ನಾನು ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. That does not mean that I am advocating that we should go back to Maharaja. We should draw a lesson somewhere. ಶಿಸ್ತಾದರೂ ಇರಬೇಕು, ಸರ್ಕಾರದ ಭಯವಾದರೂ ಇರಬೇಕು, ಕಡೆಯ ಪಕ್ಷ ದೇವರ ಭಯವಾದರೂ ಇರಬೇಕು. ಈ ಎಲ್ಲಾ ತಪ್ಪುಗಳಿಂದ ಈಗಿನ ವ್ಯವಸ್ಥೆಯಲ್ಲಿ ಅವರಿಗೆ ಕೊಟ್ಟು ಮಾಡಿಸಿ ಎಂದರೆ ಏನು ಮಾಡುತ್ತಾರೆ? ಬೆಂಗಳೂರು ಸಿಟಿ ಕಾರ್ಪೊರೇಷನ್ ರಸ್ತೆಗಳ ಬಗ್ಗೆ ಹೇಳಿ.

ಶ್ರೀಮತಿ ಪ್ರಮೀಳ ನೇಸರ್ಗಿ : ಅಧ್ಯಕ್ಷರೇ, ನಾನು ಹೇಳುತ್ತಿರುವುದೇನೆಂದರೆ, ಎರಡು ಕಡೆ ಟ್ಯಾಕ್ಸನ್ನು ಹಾಕುತ್ತಿದ್ದಾರೆ. ನೀವು ಮೋಟಾರ್ ವೆಹಿಕಲ್ ಟ್ಯಾಕ್ಸನ್ನು ರಸ್ತೆಗಳ ನಿರ್ವಹಣೆ ಮಾಡಲು ಎಂದು ತೆಗೆದುಕೊಳ್ಳುತ್ತೀರಿ. ಅಲ್ಲೂ ತೆಗೆದುಕೊಂಡು ಇಲ್ಲೂ ತೆಗೆದುಕೊಳ್ಳುವುದಾದರೆ ಎರಡು ಕಡೆ ಏಕೆ ಕೊಡಬೇಕು? ನೀವು ಅದನ್ನು ತೆಗೆದುಬಿಡಿ. ಎಲ್ಲವನ್ನೂ ಖಾಸಗಿಯವರಿಗೆ ಕೊಟ್ಟುಬಿಡಿ.

ಅಧ್ಯಕ್ಷರು : ಸಚಿವರೇ, ನೀವು ಸ್ವಲ್ಪ ವಿವರಣೆ ನೀಡಿ. ನೀವೂ ಅದನ್ನು ಸ್ವಲ್ಪ ಒಪ್ಪಿಕೊಳ್ಳಬೇಕು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನಾನೂ ಹೇಳಿಬಿಡುತ್ತೇನೆ. ನಂತರ ಅವರು ಒಟ್ಟಿಗೇ ಉತ್ತರ ಹೇಳಲಿ. ಹಿಂದಿನ ಸಾರಿ ಮೋಟಾರ್ ವೆಹಿಕಲ್ ಲೈಫ್ ಟ್ಯಾಕ್ಸ್ ಹಾಕುವಾಗಲೂ ಕೂಡ ಇದನ್ನೇ ಹೇಳಿದ್ದರು. ನಾವು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿದ್ದರು. ತಾವು ಹೇಳಿದಂಥ ಮಲೇಷಿಯಾ ಮುಂತಾದ ಅಭಿವೃದ್ಧಿ ಹೊಂದಿರತಕ್ಕಂಥ ರಾಷ್ಟ್ರಗಳನ್ನು ಉದಾಹರಣೆಯಾಗಿ ಅವತ್ತು ಕೊಟ್ಟು ಹೇಳಿದ್ದರು. ಆ ಮೋಟಾರ್ ವೆಹಿಕಲ್ ಟ್ಯಾಕ್ಸ್ ಕೋಟಿಗಟ್ಟಲೆ ಬರುತ್ತದೆ. ನಾವು ಇವತ್ತು ಒಂದು ಸಣ್ಣ ಕಾರನ್ನು ತೆಗೆದುಕೊಳ್ಳಬೇಕು ಎಂದರೂ ಅಥವಾ ಹಳೆಯ ಕಾರನ್ನು ಮಾರಾಟ ಮಾಡಬೇಕೆಂದರೂ ಶೇ.2ರಷ್ಟು ತೆರಿಗೆಯನ್ನು ವಸೂಲು ಮಾಡುತ್ತಾರೆ. ಹೀಗೆ ವಸೂಲು ಮಾಡಿರತಕ್ಕಂಥ ಹಣ ಯಾವುದೂ ಲೋಕೋಪಯೋಗಿ ಇಲಾಖೆಗೆ ರಸ್ತೆಗಳ ಅಭಿವೃದ್ಧಿಗೋಸ್ಕರ ಹೋಗುವುದಿಲ್ಲ. ಅದು ಎಲ್ಲಿಗೆ ಹೋಗುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ಎಲ್ಲವೂ ಹೀಗೇ ಆಗುತ್ತಿದೆ. ತಾವು ಹೇಳಿರುವುದು ಬಹಳ ಸಮಂಜಸವಾಗಿದೆ. ಹಳ್ಳಿಗಾಡಿನ ರಸ್ತೆಗಳಲ್ಲಿರುವ ಹೊಂಡ-ಗುಂಡಿಗಳನ್ನು ಮುಚ್ಚಲು ಒಂದು ಬ್ಯಾರಲ್ ಟಾರ್ ತಂದು ಹಾಕಲೂ ಇವರಿಂದ ಸಾಧ್ಯವಾಗುತ್ತಿಲ್ಲ. ಇವತ್ತು ರಸ್ತೆಗಳು ಅಷ್ಟೊಂದು ದುಸ್ತರವಾಗಿದೆ. ಈಗ ಮತ್ತೊಂದು ಸಾರಿ ನಮ್ಮ ಹತ್ತಿರ ಟ್ಯಾಕ್ಸ್ ವಸೂಲು ಮಾಡಲು ಖಾಸಗಿಯವರಿಗೆ ಕೊಡುತ್ತಿದ್ದಾರೆ.

ಅಧ್ಯಕ್ಷರು : ಹೊನ್ನಾವರದ ಸೇತುವೆ ಹೋಯಿತಲ್ಲಾ. ಯಾರಯಾರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ? ಎಷ್ಟು ಜನ ಜೈಲಿಗೆ ಹೋದರು? ಎಷ್ಟು ಜನ ಗಲ್ಲಿಗೆ ಹೋದರು? ಈ ದೇಶದ ಮಣ್ಣನ್ನು ಪ್ರೀತಿ ಮಾಡುವವನಿಗೆ, ಗೌರವಿಸುವವನಿಗೆ ಅಲ್ಲಿ ಹೋಗಿ ನಿಂತುಕೊಂಡರೆ ಏನು ಭಾವನೆ [illegible]

ಶ್ರೀ ಚಂದ್ರಕಾಂತ ಬೆಲ್ಲದ್ : ಈ ರೀತಿ ಸಾಕಷ್ಟು ಉದಾಹರಣೆಗಳು ಇವೆ. ಇವತ್ತು ಕಟ್ಟುವುದು, ಮುಂದೆ ಕಡೆವುವುದು. ಈ ರೀತಿ ಒಂದಲ್ಲ, ಎರಡಲ್ಲ, ಸಾಕಷ್ಟು ಸೇತುವೆಗಳಿವೆ.

ಅಧ್ಯಕ್ಷರು : ಈ ವ್ಯವಸ್ಥೆಯಲ್ಲಿ ತಪ್ಪು ಮಾಡಿದವರಿಗೆ ನಾವು ಶಿಕ್ಷೆ ಕೊಡಲು ಆಗುವುದಿಲ್ಲ. ಅವರು ಕ್ವಾಲಿಟಿ ಎನ್‌ಷೂರ್ ಮಾಡುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಈ ಇಲಾಖೆಯನ್ನು ಬರೀ ಟ್ಯಾಕ್ಸ್ ಹಾಕುವುದಕ್ಕೋಸ್ಕರ ಉಪಯೋಗಿಸದೇ; ಆ ಇಲಾಖೆಯನ್ನು ಪ್ರಾಮಾಣಿಕವಾಗಿ ನಡೆಸಬೇಕು. ಆರ್ಥಿಕ ಮಂತ್ರಿಗಳು ಲೋಕೋಪಯೋಗಿ ಮಂತ್ರಿಗಳ ಕೈಯಲ್ಲಿ ಹಣ ಕೊಟ್ಟು ಸರಿಯಾದ ರೀತಿಯಲ್ಲಿ ನಡೆಸುವುದಾದರೆ, ಶಿಸ್ತಿನಿಂದ ನಡೆಸುವುದಾದರೆ ಖಂಡಿತವಾಗಿ ಮಾಡಬಹುದು. ಈ ದೇಶದಲ್ಲಿ ಮಾಡಲು ಆಗದೇ ಇರುವಂಥಾದ್ದು ಏನೂ ಇಲ್ಲ. ಯಾರೂ ಹೇಳುವವರು, ಕೇಳುವವರು ಇಲ್ಲ ಎನ್ನುವಂಥ ಇಲಾಖೆ ಆದಾಗಿದೆ. ಈ ರೀತಿ ನಡೆಸಿದರೆ, ನೀವು ಇನ್ನು ಯಾವುದೇ ರೀತಿಯ ಟ್ಯಾಕ್ಸ್ ಹಾಕಿದರೂ ಈ ರಾಜ್ಯವನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ, ಈ ರಾಜ್ಯದ ರಸ್ತೆಗಳನ್ನು, ಸೇತುವೆಗಳನ್ನು ಸರಿ ಮಾಡಲು ಆಗುವುದಿಲ್ಲ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಎಲ್ಲಿ ತಪ್ಪಾಗಿದೆ ಎನ್ನುವುದನ್ನೇ ಇವತ್ತು ಗುರುತಿಸಬೇಕಾಗಿದೆ. ಅಧ್ಯಕ್ಷರು ಹೇಳಿದಂತೆ ಇವತ್ತು ಯಾವುದಕ್ಕೂ, ಯಾರಿಗೂ ಶಿಕ್ಷೆಯಾಗಿಲ್ಲ. ಮಲಪ್ರಭಾ ನೀರಿನ ಸೇತುವೆ ಸೋರುತ್ತಿದೆ. 1983ರಲ್ಲಿ ನಾಲ್ಕು ಕಡೆ ಸೋರುತ್ತಿದ್ದರೆ, ಇವತ್ತು ಇನ್ನೂ ಹೆಚ್ಚು ಕಡೆಗಳಲ್ಲಿ ಸೋರುತ್ತಿದೆ.

ಅಧ್ಯಕ್ಷರು : ಶಿಕ್ಷೆ ಕೊಡಲು ಏನು ತೊಂದರೆ ಎಂದರೆ, ಈ ದೇಶದಲ್ಲಿ ಎಲ್ಲವೂ ನಡೆಯುವುದು ಜಾತಿಯ ಮೇಲೆ ಓಟನ್ನು ತೆಗದುಕೊಳ್ಳುವುದು ಜಾತಿಯ ಮೇಲೆ, ಗೆದ್ದು ಬರುವುದು ಜಾತಿಯ ಮೇಲೆ, ಉದ್ಯೋಗ ಕೊಡುವುದು ಜಾತಿಯ ಮೇಲೆ, ಬಡ್ತಿ ಕೊಡುವುದು ಜಾತಿಯ ಮೇಲೆ, ಅದೇ ರೀತಿ ಶಿಕ್ಷೆ ಕೊಡುವುದೂ ಜಾತಿಯ ಮೇಲೆ. ಹೀಗಿರುವಾಗ ಹೇಗೆ ಶಿಕ್ಷೆ ಕೊಡುತ್ತೀರಿ?

ಶ್ರೀ ಚಂದ್ರಕಾಂತ ಬೆಲ್ಲದ್ : ಇನ್ನೂ ಒಬ್ಬರಿಗೂ ಶಿಕ್ಷೆ ಕೊಟ್ಟಿಲ್ಲ. ಇವತ್ತು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಕೊಡುವಷ್ಟು ಹಣವನ್ನು ಇವುಗಳ ಅಭಿವೃದ್ಧಿಗೆ ಕೊಡುತ್ತಿಲ್ಲ.

ಅಧ್ಯಕ್ಷರು : ಒಬ್ಬನ ಮೇಲೆ ಆಪಾದನೆ ಬಂದ ತಕ್ಷಣ ಅವನು ಯಾವ ಜಾತಿ ಎಂದು ನೋಡುತ್ತೇವೆ. ಜಾತಿಯವರೆಲ್ಲಾ ಒಂದಾಗುತ್ತೇವೆ. ನಾಚಿಕೆ ಬಿಟ್ಟ ಜನ ನಾವು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ ಸೆಕ್ಷನ್ 119 (ಬಿ)ಯಲ್ಲಿ ಮಿಸ್‌ಚೀಫ್ ಎನ್ನುವುದನ್ನು ಕಾಣಿಸಿದ್ದಾರೆ. ಮಿಸ್‌ಚೀಫ್ ಅಂದರೆ ಏನು? ಅದರ ಅರ್ಥವನ್ನು ಪೂರ್ತಿ ಹೇಳಬೇಕು. ಯಾರಾದರೂ ದಾರಿಯಲ್ಲಿ ಆಕಸ್ಮಾತ್ತಾಗಿ ನೇಚರ್ ಕಾಲ್‌ಗೆ ನಿಂತರೂ ಕೂಡ ಅದು ಮಿಸ್‌ಚೀಫ್ ಆಗುತ್ತದೆಯಲ್ಲವೇ? ಇದು ವೇಗ್ ಆಗಿದೆ. ಅದನ್ನು ಕ್ಲಿಯರ್ ಮಾಡಲಿ. ಮಿಸ್‌ಚೀಫ್ ಎಂದು ಹೇಳಿದರೆ ಅದರ ಅರ್ಥ ಏನು ಎನ್ನುವುದು ಬೇಕಲ್ಲವೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ತಾವು ಹೇಳಿರುವಂತೆ, ಬೇರೆ ಬೇರೆ ದೇಶಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಈ ರೀತಿಯ ಕಾನೂನನ್ನು ತಂದು ಮಾಡಿದ್ದಾರೆ. ಆದರೆ ಸರ್ಕಾರದ ಮಟ್ಟದಲ್ಲಿ ಮಂತ್ರಿಗಳಿಗೆ, ಅವರ ಇಲಾಖೆಗೆ ಸಂಬಂಧಪಟ್ಟಂಥ ಒಂದೊಂದು ವಿಭಾಗದಲ್ಲಿ ಎಷ್ಟು ಇಂಜಿನಿರುಗಳು ಇರಬೇಕು ಎನ್ನುವುದರ ಬಗ್ಗೆ ಲೆಕ್ಕಾಚಾರವಿಲ್ಲ. ಉದಾಹರಣೆಗೆ ಹೇಳುವುದಾದರೆ, ತಮ್ಮ ಕ್ಷೇತ್ರದಲ್ಲಿ ಕೆಲಸ ಇಲ್ಲದೇ ಇರುವಂಥ ಸಹಾಯಕ ಕಾರ್ಯಪಾಲಕ ಇಂಜಿನಿಯರುಗಳು ಮತ್ತು ಜೂನಿಯರ್ ಇಂಜಿನಿಯರುಗಳು 6-7 ಜನರಿದ್ದಾರೆ. ಅವರಿಗೆ ಸಂಬಳ ಎಲ್ಲಿಂದ ಬರುತ್ತದೆ. ನನ್ನ ಕ್ಷೇತ್ರದಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಜೊತೆಗೆ 9 ಜನ ಜೂನಿಯರ್ ಇಂಜಿನಿಯರುಗಳಿದ್ದಾರೆ. ಅವರಿಗೆ ಲೋಕೋಪಯೋಗಿ ಇಲಾಖೆಯನ್ನು ಮೂರು ಕಾಸಿನ ಕೆಲಸವಿಲ್ಲ. ಆ ಸಂಬಳದ ದುಡ್ಡು ಎಲ್ಲಿಂದ ಬರುತ್ತದೆ ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛೆ ಪಡುವುದೇನೆಂದರೆ, ಇಲ್ಲಿ ನಾವು ಸುಂಕವನ್ನು ಹಾಕಬೇಕೇ ಎನ್ನುವ ಪ್ರಶ್ನೆ ಬರುತ್ತದೆ ಸೆಕ್ಷನ್ 19(ಎ) ನಲ್ಲಿ ನಾವು ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದೇವೆ. ಯಾವುದೇ ಒಬ್ಬ ವ್ಯಕ್ತಿ ತಾನು ಸಲ್ಲಿಸಿದ ಸೇವೆಗಳ ಅಥವಾ ನೀಡಿದ ಸೌಲಭ್ಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಂಥ ಹೆದ್ದಾರಿಯ ಪೂರ್ಣ ಅಥವಾ ಭಾಗಶಃ ನಿರ್ಮಾಣ, ನಿರ್ವಹಣೆ, ಮೇಲ್ವಿಚಾರಣೆ, ಪ್ರವರ್ತನೆಗೆ ತಗಲುವ ವೆಚ್ಚ, ಹೂಡುವ ಬಂಡವಾಳದ ಮೇಲಿನ ಬಡ್ಡಿ, ಸೂಕ್ತ ಉತ್ಪತ್ತಿ, ವಾಹನ ಸಂಚಾರದ ಸಾಂದ್ರತೆ ಮತ್ತು ಅಂಥ ಒಪ್ಪಂದದ ಅವಧಿಯನ್ನು ಗಮನದಲ್ಲಿಟ್ಟುಕೊಂಡು. ಏಕೆಂದರೆ, ರಸ್ತೆಗಳನ್ನು ನಿರ್ಮಾಣ ಮಾಡುವಾಗ, ಅದಕ್ಕೆ ಅವನು ಏನು ಹಣ ಖರ್ಚು ಮಾಡಿರುತ್ತಾನೆ, ಅದಕ್ಕೆ ಆಗುವಂಥ ಬಡ್ಡಿಯನ್ನು ಮತ್ತು ಅವರಿಗೆ ರಿಟರ್ನ್ ಬಗ್ಗೆ ಗಮನದಲ್ಲಿಟ್ಟುಕೊಂಡು, ಅಲ್ಲಿ ಸುಂಕ ಹಾಕುವಂಥ ಕ್ರಮವನ್ನು ಮಾಡುತ್ತಾರೆಯೇ ಹೊರತು ಬೇರೆ ಎಲ್ಲಾ ಸರ್ಕಾರಿ ರಸ್ತೆಗಳಿಗೆ ಸುಂಕ ಹಾಕಬೇಕು ಎನ್ನುವ ಉದ್ದೇಶ ಇಲ್ಲ. ಖಾಸಗಿ ವ್ಯಕ್ತಿಗಳು ಹೊಸದಾಗಿ ಸೇತುವೆಗಳನ್ನು ನಿರ್ಮಾಣ ಮಾಡಿದಾಗ ಖಾಸಗಿ ವ್ಯಕ್ತಿಗಳು ಹೊಸದಾಗಿ ರಸ್ತೆಗಳನ್ನು ನಿರ್ಮಾಣ ಮಾಡಿದಾಗ, ಅಲ್ಲಿ ತಗಲುವ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಒಟ್ಟು ರಸ್ತೆಗಳನ್ನು ನಿರ್ಮಾಣ ಮಾಡುವಾಗ ಹಣ ಏನಾಗಿದೆ ಎನ್ನುವುದನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಇಡೀ ದೇಶದಲ್ಲಿ ಇದಕ್ಕಾಗಿ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ.6.75ರಷ್ಟು ಹಣ ದೊರೆಯುತ್ತಿದ್ದರೆ, ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇ. ಒಂದರಷ್ಟು ಹಣ ಮಾತ್ರ ನಮಗೆ ದೊರೆಯುತ್ತಿದೆ. ಹೀಗಿರುವಾಗ ರಸ್ತೆಗಳನ್ನು ನಿರ್ಮಾಣ ಮಾಡಬೇಕಾದಾಗ ಮತ್ತು ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡದೇ ಇದ್ದರೆ, ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಲು ಆಗುವುದಿಲ್ಲ. ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕಾದರೆ ಅವರಿಗೆ ಅತ್ಯಂತ ಅವಶ್ಯಕವಾಗಿ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಖಾಸಗೀ ವ್ಯಕ್ತಿಗಳನ್ನು ಇದರಲ್ಲಿ ತೊಡಗಿಸಬೇಕು ಎನ್ನುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಅದಕ್ಕೆ ಸುಂಕ ವಸೂಲು ಮಾಡುವಂಥ ಅವಕಾಶವನ್ನು ಕೊಡದಿದ್ದರೆ, ಯಾವ ಉದ್ದಿಮೆದಾರರೂ ಮುಂದೆ ಬರುವುದಿಲ್ಲ ಎನ್ನುವುದನ್ನೂ ಸಹ ಗಮನದಲ್ಲಿ ಇಡಬೇಕು. ಮಾನ್ಯ ಅದಕರು ಹೇಳಿದ ಹಾಗೆ ಇಡೀ ದೇಶದಲ್ಲಿ ಈ ವ್ಯವಸ್ಥೆ ಬರುತ್ತಿದೆ. ಇಡೀ ದೇಶದಲ್ಲಿ

ಇಂಥ ಖಾಸಗಿ ಉದ್ದಿಮೆದಾರರಿಗೆ ರಸ್ತೆಗಳನ್ನು ನಿರ್ಮಾಣ ಮಾಡುವಂಥ ಕೆಲಸವನ್ನು ಕೊಟ್ಟಿದ್ದಾರೆ. ಇನ್ನು, ಶಿಕ್ಷೆಯನ್ನು ಕೊಡಬೇಕಾದಂಥ ವಿಚಾರದಲ್ಲಿ ಮಿಸ್‌ಚೀಫ್ ಅಂದರೆ ಏನು ಎಂದು ಕೇಳಿದರು. ದುಷ್ಕೃತ್ಯ ಎನ್ನುವುದರ ಬಗ್ಗೆ ಹೇಳಿದರು. ದುರ್ಬಲಗೊಳಿಸುವುದು ಎಂದರೆ ರಸ್ತೆಗಳನ್ನು ಒಡೆದು ಹಾಕುವುದು, ಅಲ್ಲಿ ಮನೆಗಳನ್ನು ಕಟ್ಟುವುದು ಇಂಥ ಸಂದರ್ಭಗಳಲ್ಲಿ ಮಾತ್ರ ಅದಕ್ಕೆ ಪ್ರತಿಭಟನೆ ಬರುತ್ತದೆಯೇ ಹೊರತು ಉಳಿದ ಸಂದರ್ಭದಲ್ಲಿ ಬರುವುದಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ನಾನು ಇಲ್ಲಿ ಇಚ್ಛಿಪಡುತ್ತಿದ್ದೇನೆ. ಶಿಕ್ಷೆಯ ಅವಧಿಯನ್ನು 5 ವರ್ಷದ ಬದಲಾಗಿ 3 ವರ್ಷ ಎಂದು ಮಾಡಬೇಕೆಂದು ಹೇಳಿದರು. ಅದನ್ನು ಮಾಡಬಹುದು.

ಅಧ್ಯಕ್ಷರು : ಸುಮ್ಮನೆ ಭಯ ಇರಲಿ ಎಂದು ಒಂದು ವರ್ಷ ಎಂದು ಮಾಡಿಕೊಳ್ಳಿ. ಅದೇನೂ ಜೈಲಿಗೆ ಹಾಕುವುದು, ಅದು ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 'ಮಿಸ್‌ಚೀಫ್' ಎನ್ನತಕ್ಕಂಥ ಪದ ತೆಗೆದುಬಿಡಿ.

ಶ್ರೀ ಸಿ.ಎಂ. ಉದಾಸಿ : ಇಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. "ಹೆದ್ದಾರಿಯನ್ನು ಪ್ರಯಾಣಿಕರ ಅಥವಾ ಸ್ವತ್ತಿನ ಸಾಕಾಣಿಕೆಯನ್ನು ದುರ್ಬಲವಾಗಿಸುವಂಥ ಅಥವಾ ಹೆಚ್ಚು ಸುರಕ್ಷಿತವಲ್ಲದಂತೆ ಮಾಡುವ" ಇದರ ಅರ್ಥ ಏನೆಂದರೆ ಅಲ್ಲಿ ರಸ್ತೆಗಳಲ್ಲಿ ಮನೆ ಕಟ್ಟಿಕೊಳ್ಳುವಂಥ ವ್ಯಕ್ತಿ...

ಶ್ರೀ ಸಿ.ಆರ್. ಸಗೀರ್ ಅಹಮದ್ : ಸ್ವಾಮಿ ಮಂತ್ರಿಗಳೇ, ಒಂದು ನಿಮಿಷ ದಯವಿಟ್ಟು ಕೇಳಿ. ಇವತ್ತು ಪಟ್ಟಣ ಪ್ರದೇಶಗಳಲ್ಲಿ ಅದರ ವ್ಯಾಪ್ತಿಯಲ್ಲಿ ಇರುವ ರಸ್ತೆಗಳನ್ನು ಅಗಲ ಮಾಡುವುದಕ್ಕಾಗಿ ಮನೆಗಳನ್ನು ತಾವು ಒಡೆಯುತ್ತಿದ್ದೀರಿ. ದಾವಣಿಗೆರೆಯಲ್ಲಿ ಹೀಗೆ ಮನೆಗಳನ್ನು ಒಡೆದಿದ್ದೀರಿ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೀಗೆ ಒಡೆಯುತ್ತಿದ್ದೀರಿ. ರಾಜ್ಯ ಹೆದ್ದಾರಿಗಳಲ್ಲೂ ಒಡೆದಿದ್ದೀರಿ. ಹೀಗೆ ಒಡೆದವರನ್ನೆಲ್ಲಾ ನೀವು ಜೈಲಿಗೆ ಕಳುಹಿಸುತ್ತೀರಾ ಹೇಳಿ. ಈ ಮಸೂದೆಯ ಪ್ರಕಾರ ಅವರು ಏನಾದರೂ ತಡೆಯುವುದಕ್ಕೆ ಬಂದಾಗ ಅವರನ್ನು ಜೈಲಿಗೆ ಕಳಿಸುತ್ತೀರಾ?

ಶ್ರೀ ಸಿ.ಎಂ. ಉದಾಸಿ : ಆ ವಿಷಯವೇ ಇದರಲ್ಲಿ ಬರುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಏಕೆ ಬರುವುದಿಲ್ಲ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಎನ್‌ಕ್ರೋಚ್‌ಮೆಂಟ್‌ಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ರಿಮೂವಲ್ ಆಫ್ ಎನ್‌ಕ್ರೋಚ್‌ಮೆಂಟ್ ಆದಾಗ ಅದನ್ನು ತಡೆಯುವುದಕ್ಕಂತೂ ಬರುತ್ತಾರಲ್ಲಾ?

ಶ್ರೀ ಹೆಚ್. ಶಿವಪ್ಪ : ಎನ್‌ಕ್ರೋಚ್‌ಮೆಂಟ್ ಬೇರೆ, ಇದು ಬೇರೆ.

ಅಧ್ಯಕ್ಷರು : ಶಿವಪ್ಪ ಈಸ್ ರೈಟ್.

ಶ್ರೀ ಸಿ.ಆರ್. ಸಗೀರ್ ಅಹಮದ್ : ಪಿ.ಡಬ್ಲ್ಯೂ.ಡಿ. ಯವರೇ ಒಡೆಯುವುದು. ನ್ಯಾಷನಲ್ ಹೈವೆಯವರು ಯಾರೂ ಬರುವುದಿಲ್ಲ.

ಅಧ್ಯಕ್ಷರು : ಶಿವಪ್ಪನವರು ಹೇಳಿದ್ದು ಕರೆಕ್ಟ್. ಯಾರು ರಸ್ತೆ ಲಿಮಿಟ್ಸ್‌ನಲ್ಲಿ ಬಂದು ಎನ್‌ಕ್ರೋಚ್‌ಮೆಂಟ್ ಮಾಡಿರುತ್ತಾರಲ್ಲಾ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ರಸ್ತೆ ಎಲ್ಲಾ ಎನ್‌ಕ್ರೋಚ್‌ಮೆಂಟ್ ಮಾಡುವುದಕ್ಕೆ ಬಿಟ್ಟರೆ ರಸ್ತೆ ಎಲ್ಲಿ ಬರುತ್ತದೆ?

ಶ್ರೀ ಕೆ.ಎಸ್. ಈಶ್ವರಪ್ಪ : ಎನ್‌ಕ್ರೋಚ್‌ಮೆಂಟ್ ಹೇಗೆ ಇರುತ್ತದೆ ಎಂದರೆ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಪರ್ಮಿಷನ್ ಕೊಟ್ಟಿದ್ದಾರೆ, ನಗರಸಭೆಯವರು ಪರ್ಮಿಷನ್ ಕೊಟ್ಟಿದ್ದಾರೆ, ಇದು ಎನ್‌ಕ್ರೋಚ್‌ಮೆಂಚ್ ಹೇಗೆ ಆಗುತ್ತದೆ? ಯಾರು ಅಧಿಕಾರಿಗಳು ಕೊಟ್ಟಿರುತ್ತಾರೋ ಅವರನ್ನು ಜೈಲಿಗೆ ಕಳುಹಿಸಿ ವಿಚಿತ್ರ ಅಲ್ವಾಸಾರ್ ಇದು? ಲೈಸೆನ್ಸ್ ಕೊಟ್ಟಿರುತ್ತಾರೆ...

ಅಧ್ಯಕ್ಷರು : ಇರಲಿ ಬಿಡಿ. ಈಗ ಬಿಲ್‌ಗೆ ಬರೋಣ.

ಶ್ರೀ ಸಿ.ಎಂ. ಉದಾಸಿ : ಆ ವಿಷಯ ಬೇರೆ. ಆ ವಿಷಯ ಬಂದಾಗ ಬೇಕಾದರೆ...

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಒಂದು ಶಬ್ದವನ್ನು ನೀವು ವಾಪಸ್ಸು ತೆಗೆದುಕೊಳ್ಳಬೇಕು. ಜೈಲಿಗೆ ಕಳುಹಿಸುತ್ತೇವೆ, ಐದು ವರ್ಷ ಕಳುಹಿಸುತ್ತೇವೆ ಎಂದರೆ ನಾವು ಸತ್ಯಾಗ್ರಹಗಳನ್ನು ಮಾಡುವವರೇ, ಹೋರಾಟಗಳನ್ನು ಮಾಡುವವರೇ. ಯಾವ ಕಾರಣಕ್ಕೂ ಇದಕ್ಕೆ ಅವಕಾಶ ಕೊಡಬೇಡಿ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಿ. ಜೈಲಿಗೆ ಹೋಗುವ ಸಲುವಾಗಿ ನಾವು ಇರುವುದಿಲ್ಲ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ನಾವು ಮಾಡಬೇಕಾದಂಥ ಕೆಲಸ ಬಗ್ಗೆ ಆಲೋಚನೆ ಮಾಡಬೇಕು. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಹೆಚ್ಚು ಮಾಡಿದಾಗ ಸಿಕ್ಕಿರುವಂಥ ಹಣದಿಂದ ಎಷ್ಟು ರಸ್ತೆಗಳನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಾಯಿತು. ಇವತ್ತು ಲಭ್ಯವಾಗತಕ್ಕಂಥ ಹಣವನ್ನು ನಾವು....

ಅಧ್ಯಕ್ಷರು : 'ಮಿಸ್‌ಚೀಫ್' ಎಂದರೆ ಶಿವಪ್ಪನವರೇ ನಿಮಗೆ ಹೇಳುತ್ತೇನೆ. ಒಳ್ಳೆಯ ಜಂಕ್ಷನ್‌ನಲ್ಲಿ ಒಂದು ಬಂಡೆಯನ್ನು ನಿಲ್ಲಿಸಿಬಿಡುವುದು. ಅದರ ಮೇಲೆ ಒಂದು ಕೋತಿ ಚಿತ್ರ ಬರೆಯುವುದು. ಅದಕ್ಕೆ ಅರಶಿನ, ಕುಂಕುಮ ಹಚ್ಚಿ ಬಿಡುವುದು ಮತ್ತು ಪೂಜೆ ಮಾಡುವುದು. ಆಗ ಅದು ದೇವರಾಗುತ್ತದೆ. ಜನ ಅಲ್ಲಿ ವಾಹನಗಳನ್ನು ನಿಲ್ಲಿಸಿಬಿಡುವುದು ಆಗಲೇ ಅಲ್ಲಿ ಆಕ್ಸಿಡೆಂಟ್ ಆಗುತ್ತದೆ. ಅದನ್ನು ಯಾರೂ ಮುಟ್ಟುವಹಾಗಿಲ್ಲ. ಅದು ದೇವರು ಆಗಿಬಿಡುತ್ತದೆ, ಪವಿತ್ರವಾದದ್ದು ಆಗಿಬಿಡುತ್ತದೆ. ಇಲ್ಲದಿದ್ದರೆ ಒಂದು ಹಸಿರು ಬಾವುಟ ಹಾರಿಸುವುದು, ಅಲ್ಲಿ ಒಂದು ದರ್ಗಾ ಅಂತ ಮಾಡುವುದು. ವಿಶ್ವೇಶ್ವರಪುರಂ ಸರ್ಕಲ್ ಹೇಗಿದೆ, ಹೋಗಿ ನೋಡಿ. ಎಷ್ಟು ಚಂದದ ಪಾರ್ಕು ಇತ್ತು. ಅಲ್ಲಿ ಈಗ ತುಂಬಾ ದೇವಸ್ಥಾನಗಳು ಇವೆ. ದೇವರು ಏನು ನಮಗೆ ಕಡಿಮೆ ಇದ್ದಾರಾ? ಇರುವ ದೇವರುಗಳೇ ನಮ್ಮ ಕಷ್ಟಸುಖ ವಿಚಾರಿಸಿದರೆ ಸಾಕು. ಮಿಸ್‌ಚೀಫ್ ಎಂದರೆ, ಮಿಸ್‌ಚೀಫ್ ಮಾಡುವುದಕ್ಕೆ ನಾವು ನಿಷ್ಣಾತರು. ಬಸ್ಸು ನನ್ನ ಮನೆ ಮುಂದೆ, ತೋಟದ ಮುಂದೆ, ಊರ ಮುಂದೆ ನಿಲ್ಲಬೇಕು. ಅಲ್ಲಿ ನಾವೇ ಒಂದು ಸ್ಪೀಡ್ ಹಂಪ್ ಹಾಕಿ ಬಿಡುವುದು. ಸ್ಪೀಡ್‌ಹಂಪ್‌ಗೆ ಸ್ಪೆಸಿಫಿಕೇಷನ್ ಏನಾದರೂ ಇದೆಯಾ? ಅಲ್ಲಿ ಗುರುತುಮಾಡಿ, ಬಣ್ಣ ಬಳಿಯುತ್ತಾರಾ? ಅರ್ಧ ಜನ ಈಗ ಸ್ಪೀಡ್‌ಹಂಪ್‌ಗಳಲ್ಲೇ ಸಾಯುತ್ತಿದ್ದಾರೆ.

ಮಂತ್ರಿಗಳು ಇದ್ದಾರೆ, ಬೇಕಾದರೆ ಅವರನ್ನು ಕೇಳಿ. ಬೆಂಗಳೂರಿನ ರಾಜಾಜಿನಗರದ ಮುಖ್ಯರಸ್ತೆಯಲ್ಲಿ, ಕಾರ್ಡ್ ರೋಡ್‌ನಲ್ಲಿ ಹೋಗುವಾಗ ಅಲ್ಲಿ ಸ್ಪೀಡ್‌ಹಂಪ್ ಹಾಕಿದ್ದಾರೆ. ಅದು ಯಾವ ಇಂಜಿನಿಯರೋ, ಆತ ಮನುಷ್ಯನೋ ಅಲ್ಲವೋ. ಅವನು ಎಲ್ಲಿ ಓದಿದ್ದಾನೋ ಗೊತ್ತಿಲ್ಲ. ಅದರ ಬದಲು ಕ್ಲೀನ್ ಆಗಿ ಬ್ರಿಡ್ಜ್ ಕಟ್ಟಿಬಿಟ್ಟು ಆ ಕಡೆ ಜನ ಆ ಕಡೆ, ಈ ಕಡೆಯ ಜನ ಈ ಕಡೆಗೆ ಎಂದು ಮಾಡಿದ್ದರೆ ಒಳ್ಳೆಯದಿತ್ತು. ಸಣ್ಣ ಕಾರು ಮಾರುತಿಯಲ್ಲಿ ಕೂಡ ಅಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲ. ಅದೆಲ್ಲಾ ಮಿಸ್‌ಚೀಫ್ ಅವರು ಮಾಡಿದರೂ ಮಿಸ್‌ಚೀಫೇ, ಬೇರೆಯವರು ಮಾಡಿದರೂ ಮಿಸ್‌ಚೀಫೇ. ರಸ್ತೆಯ ಪಕ್ಕದಲ್ಲೇ ಒಂದು ಒಂದು ಹೋಟೆಲ್ ಇಡುವುದು, ಅಲ್ಲೇ ಒಂದು ದೇವಸ್ಥಾನ ಕಟ್ಟುವುದು, ಇಲ್ಲ ಒಂದು ಬಿಲ್ಡಿಂಗ್ ಕಟ್ಟುವುದು ಇದೆಲ್ಲಾ ಮಿಸ್‌ಚೀಫೇ. ಅಲ್ಲೇ ಸ್ಪೀಡ್‌ಹಂಪ್ ಹಾಕುವುದು ಮಾಡುತ್ತಾರೆ. ಇವರಿಗೆ ಒಂದು ಚೂರು ಭಯ ಬೇಡವೆ? ಭಯ ಇಲ್ಲದಿದ್ದರೆ ಹೇಗೆ?

ಶ್ರೀ ಚಂದ್ರಕಾಂತ ಬೆಲ್ಲದ್ : ಅವರು ಯಾರಿಗೂ ಹೇಳುವವರು ಕೇಳುವವರು ಇಲ್ಲ. ಅಂತಹ ಜನರಿಗೆ ಪ್ರಮೋಷನ್ ಸಿಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರು ದೇವರು ಬಗ್ಗೆ ಪ್ರಸ್ತಾಪ ಮಾಡಿದರು. ಬೆಂಗಳೂರು ನಗರದಲ್ಲಿ ನಾವೆಲ್ಲರೂ ಏರ್‌ಲೈನ್ಸ್ ಹೋಟೆಲ್‌ಗೆ ಹೋಗುತ್ತೇವೆ. ಅಲ್ಲಿ ಮುಂದುಗಡೆ ಒಂದು ಪಾರ್ಕು ಇದೆ. ಅಲ್ಲಿ ಒಂದು ಈಶ್ವರ ಲಿಂಗ ಇದೆ. ತಾವು ಏನಾದರೂ ಸಮಯ ಸಿಕ್ಕಿದರೆ ಹೋಗಿ ನೋಡಬೇಕು. ಪ್ರತಿನಿತ್ಯ ಬೆಳಿಗ್ಗೆಯಿಂದ ಸಂಜೆವರೆಗೆ ಅಲ್ಲಿ ಹೋಗುವಂಥ ಜನರು ಪೂಜೆ ಮಾಡುತ್ತಾರೆ. ಏನು ಇಷ್ಟು ಪೂಜೆ ಮಾಡುತ್ತಾರಲ್ಲಾ ಎಂದು ಹೇಳಿ. ನಾನು ಒಂದು ದಿವಸ ಹೋಗಿ ಅದನ್ನು ನೋಡಿದೆ. ನನಗೆ ಅದು ಲಿಂಗ ಆಕಾರವಾಗಿ ಕಾಣಲಿಲ್ಲ. ಚೆನ್ನಾಗಿ ನಿಂತುಕೊಂಡು ನೋಡಿದಾಗ ಈ ದೋಸೆಹಿಟ್ಟು ತಿರುಗಿಸುವ ಕಲ್ಲು ಅದಾಗಿತ್ತು. ಈವಾಗ ಎಲೆಕ್ಟ್ರಿಕಲ್ ಎಲ್ಲಾ ಬಂದಮೇಲೆ ಆ ದೋಸೆಹಿಟ್ಟು ತಿರುಗಿಸುತ್ತಿದ್ದ ಕಲ್ಲನ್ನು ತಂದು ಅಲ್ಲಿ ಇಟ್ಟು ಅಲ್ಲಿಯ ಕೆಲಸಗಾರರು ಅದಕ್ಕೆ ಕುಂಕುಮಹಚ್ಚಿಬಿಟ್ಟರು. ತಾವು ಹೇಳಿದಹಾಗೆ ಇವತ್ತು ಅಲ್ಲಿ ಎಷ್ಟರಮಟ್ಟಿಗೆ ಪೂಜೆ ನಡೆಯುತ್ತಿದೆ ಎಂದರೆ ಬಹುಶಃ ಕಾಶಿ ವಿಶ್ವನಾಥನಿಗೂ ಅಷ್ಟು ಪೂಜೆ ನಡೆಯುವುದಿಲ್ಲ. ಇಷ್ಟು ದೈವಭಕ್ತಿ ಇರತಕ್ಕಂಥ ಈ ದೇಶದಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಅದು ದೈವಭಕ್ತಿ ಅಲ್ಲ, ಮೌಢ್ಯ ಸೈಂಟಿಫಿಕ್ ಟೆಂಪರ್‌ಮೆಂಟ್ ಇಲ್ಲ. ನೀವು ವಿಜ್ಞಾನ ಓದಬೇಕಾಗಿಲ್ಲ, ವಿಜ್ಞಾನಿಯಾಗಬೇಕಾಗಿಲ್ಲ. ವೈಜ್ಞಾನಿಕವಾದ ಟೆಂಪರ್‌ಮೆಂಟ್ ಅದನ್ನು ಬಳಸಿಕೊಳ್ಳದೇ ಹೋದರೆ ಎಲ್ಲಾ ದೇಶಗಳಿಗೂ ಇದೇ ಗತಿ ಬರುವುದು. ಸೈಂಟಿಫಿಕ್ ಟೆಂಪರ್‌ಮೆಂಟ್ ಇಲ್ಲದೇ ಇರುವ ದೇಶಗಳೆಲ್ಲದರಲ್ಲೂ ಇದೇ ಗತಿ. ಮಣ್ಣು ತಿನ್ನುವುದು, ಕೊಂಬೆ ಹಿಡಿದು ನೇತಾಡುವುದು, ಮೋಡಿನಲ್ಲಿ ಮಲಗುವುದು, ಕೋತಿ ಚಿತ್ರ ಬರೆದು ಪೂಜೆ ಮಾಡುವುದು ಇದೆಲ್ಲಾ.....

ಶ್ರೀ ಬಿ.ಬಿ. ಶಿವಪ್ಪ : ಅದನ್ನು ನೋಡಿಯಾದಮೇಲೆ ನನಗನಿಸಿದ್ದು ಏನೆಂದರೆ, ಆ ದೋಸೆ ಸುಬ್ಬುವಂಥ ಕಲ್ಲು ಹಲವಾರು ವರ್ಷ ರುಬ್ಬಿರುಬ್ಬಿ ಅದಕ್ಕೆ ಈಗ ಅದಕ್ಕೆ ಮುಕ್ತಿ ಸಿಕ್ಕಿದೆ ಎನ್ನುವ ಭಾವನೆ ನನಗೆ ಬಂತು.

ಅಧ್ಯಕ್ಷರು : ನಾವು ಪ್ರತಿಸಲ ಡಾರ್ವಿನ್ ಹೇಳಿದ್ದು ತಪ್ಪು ಎಂದು ಪ್ರೂವ್ ಮಾಡುವುದಕ್ಕೆ ಟ್ರೈ ಮಾಡುತ್ತಾ ಇರುವ ಜನ.

ಶ್ರೀ ಎಂ. ಬಸಪ್ಪ : ರಾಷ್ಟ್ರೀಯ ಹೆದ್ದಾರಿಯಲ್ಲೂ ಕೂಡ ಇದು ಆಗುತ್ತಿದೆ. ಅಲ್ಲೇ ಮಲಗಿಕೊಳ್ಳುತ್ತಾರೆ. ರಾತ್ರಿ ಪ್ರಯಾಣ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಅದಕ್ಕೇ ತಾವು ಸ್ಪಷ್ಟವಾಗಿ ಹೇಳಬೇಕು. ನೀವು ಏಕೋ ಮುಲಾಜ್ ನೋಡುತ್ತಿದ್ದೀರಿ. ಸ್ಪಷ್ಟವಾಗಿ ಹೇಳಿದರೇನೇ ಅವರಿಗೆ ಗೊತ್ತಾಗುವುದು. ನಿಮ್ಮ ಉದ್ದೇಶ ಸರಿ ಇದೆ. ಸರಿಯಾಗಿ ಹೇಳುವ ಕ್ಲೂ ಪಡೆದುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ : ಸಭಾಧ್ಯಕ್ಷರೇ, ಇವತ್ತು ಮಾನ್ಯ ಸದಸ್ಯರು ಬಹಳಷ್ಟು ಜನ ಶಿಕ್ಷೆ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಆಕ್ಷೇಪ ಎಂದರೆ ಇದು ಅನಿವಾರ್ಯ. ಈ ರೀತಿ ಮಾಡದೇ ಇದ್ದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ರಸ್ತೆಗಳನ್ನು ನಿರ್ಮಾಣ ಮಾಡಿದಾಗ ಒಂದುವೇಳೆ ತೊಂದರೆ ಆಗುವುದಕ್ಕೆ ಪ್ರಾರಂಭವಾಗಿದ್ದಾದರೆ ಯಾರು ಖಾಸಗಿ ವ್ಯಕ್ತಿಗಳು..

ಅಧ್ಯಕ್ಷರು : ಅವರ ಉದ್ದೇಶ ಇಷ್ಟೇ. ನಮ್ಮದು ಒಂದು ಪ್ರಜಾಪ್ರಭುತ್ವ ವ್ಯವಸ್ಥೆ. ಒಂದು ಸ್ವಲ್ಪ ಜನಪರವಾದಂಥ ಚಳುವಳಿ ಎಲ್ಲಾ ಇರುತ್ತದೆ. ಆ ತರಹ ಸನ್ನಿವೇಶದಲ್ಲಿ ಡ್ರೆಕೋನಿಯನ್ ಲಾ ಎಂದು ಹೇಳುತ್ತಾರಲ್ಲಾ, ಭಯಂಕರವಾದಂಥ ಶಾಸನಗಳನ್ನು ನಾವು ಮಾಡಬಾರದು. ಅದು ಪ್ರಜಾಪ್ರಭುತ್ವದ ಒಳ್ಳೆಯ ಲಕ್ಷಣ ಅಲ್ಲ ಎನ್ನತಕ್ಕಂಥ ಉದ್ದೇಶದಿಂದ ಅವರು ಹೇಳಿದ್ದಾರೆ. ತಪ್ಪು ಮಾಡತಕ್ಕಂಥ ಉದ್ದೇಶ ಇರತಕ್ಕಂಥವರಿಗೆ ಭಯ ಇಡುವ ಕಾರಣಕ್ಕೆ ಸಾಂಕೇತಿಕವಾಗಿ ಶಿಕ್ಷೆ ಎಂದು ತಾವು ಸಜೆಸ್ಟ್ ಮಾಡಿ. ಆರು ತಿಂಗಳೋ, ಒಂದು ವರ್ಷೋ ಎಂದು ಮಾಡಿ.

ಶ್ರೀ ಸಿ.ಎಂ. ಉದಾಸಿ : ಐದು ವರ್ಷ ಇರುವುದನ್ನು ಮೂರು ವರ್ಷ ಎಂದು ಮಾಡಬಹುದು. ಅಷ್ಟು ಮಾಡಬಹುದು.

ಅಧ್ಯಕ್ಷರು : ಒಂದು ವರ್ಷ ಎಂದು ಮಾಡಿ ಸಾಕು. ಇದು ಒಂದು ಭಯ ಹುಟ್ಟಿಸುವುದಕ್ಕೆ ಅಷ್ಟೇ. ಒಂದು ವರ್ಷ ಎಂದು ಮಾಡಿ. ನೀವೇನೂ ನಿಜವಾಗಿ ಜೈಲಿಗೆ ಹಾಕುತ್ತೀರಾ? ಅದು ಆಗುತ್ತದೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಹತ್ತು ವರ್ಷ ಶಿಕ್ಷೆ ಹಾಕಲಿ ನಾವು ಬೇಡವೆಂದು ಹೇಳುವುದಿಲ್ಲ. ಹತ್ತು ವರ್ಷಬೇಕಾದರೆ ಶಿಕ್ಷೆ ಕೊಡಲಿ. ಯಾರು ರೋಡ್ ಬ್ರಿಡ್ಜ್‌ಗೆ ಬಾಂಬ್ ಇಡುವವರಿಗೆ ರೋಡ್ ಅಗೆಯುವವರಿಗೆ ಹಾಕಲಿ. ಆದರೆ ಪ್ರತಿಭಟನೆ ಮಾಡುವವರು, ಸತ್ಯಾಗ್ರಹ ಮಾಡುವವರನ್ನು ಹೊರತುಪಡಿಸಿ ಶಿಕ್ಷೆ ಎಂದು ಹೇಳಲಿ.

ಶ್ರೀ ಸಿ.ಎಂ. ಉದಾಸಿ : ಒಂದು ವರ್ಷ ಎಂದು ಮಾಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿರ್ದಿಷ್ಟವಾಗಿ ಹೇಳಿ. ಸತ್ಯಾಗ್ರಹ ಮಾಡುವವರನ್ನು, ಪ್ರತಿಭಟನೆ ಮಾಡುವವರನ್ನು ಹೊರತುಪಡಿಸಿ ಹತ್ತು ವರ್ಷ ಶಿಕ್ಷೆ ಹಾಕಿ. ನಾವು ಬೇಡ ಎನ್ನುವುದಿಲ್ಲ.

ಶ್ರೀ ಸಿ.ಎಂ. ಉದಾಸಿ : ಅದು ಇಲ್ಲಿ ಬರುವುದಿಲ್ಲ. ಸ್ಪಷ್ಟವಾಗಿ ಬರೆದಿದ್ದೇವೆ. ಸ್ಟೈಕ್ ಮಾಡುವವರಿಗಾಗಲೀ, ಪ್ರತಿಭಟನೆ ಮಾಡುವವರಿಗಾಗಲಿ, ಈ ಕ್ರಮ ಇಲ್ಲ. ಸಾಗಾಣಿಕೆಗೆ ದುರ್ಬಲವಾಗಿಸುವಂಥ, ಹೆಚ್ಚು ಸುರಕ್ಷಿತವಲ್ಲದಂತೆ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಡ್ಯಾಮೇಜ್ ಎಂದು ಸೇರಿಸಿ.

ಶ್ರೀ ಸಿ.ಎಂ. ಉದಾಸಿ : ಯಾವುದೇ ಹೆದ್ದಾರಿಯನ್ನು ಪ್ರಯಾಣಿಕರಿಗೆ ಅಥವಾ ಸ್ವತ್ತಿನ ಸಾಗಾಣಿಕೆಗೆ ದುರ್ಬಲವಾಗಿಸುವಂಥ ಅಥವಾ ಹೆಚ್ಚು ಸುರಕ್ಷಿತವಲ್ಲದಂತೆ ಮಾಡುವ... ಇಂತಹ ಪ್ರಸಂಗಗಳಲ್ಲಿ ಮಾಡುತ್ತೇವೆ ಹೊರತಾಗಿ ಚಳುವಳಿಗಳಿಗೆ ಇದು ಅಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ತಾವು ಸ್ಪಷ್ಟಪಡಿಸಿದಂತೆ ಒಂದು ವರ್ಷಕ್ಕೆ ಅದನ್ನು ತಿದ್ದುಪಡಿ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ....

ಅಧ್ಯಕ್ಷರು : ನಿಮ್ಮದನ್ನು ಒಪ್ಪಿಕೊಂಡರಲ್ಲಾ... ಮತ್ತೆ ಏಕೆ ಹೇಳುತ್ತೀರಿ ? ಪಾಸ್ ಮಾಡೋಣವೇ ?

ಶ್ರೀ ಕಾಗೋಡು ನಿಮ್ಮಪ್ಪ : ಇದು ಏನಾಗಿದೆ ಎಂದರೆ ರಸ್ತೆ ಎಂದು ಹೇಳಿದಿರಿ, ಅದರಲ್ಲಿ ಫುಟ್‌ಪಾತ್ ಕೂಡಿರುತ್ತದೆಯೇ ? ಇದು ಸೇರುತ್ತದೆಯೇ ಎಂಬುದನ್ನು ಹೇಳಬೇಕಾಗುತ್ತದೆ. ಏಕೆಂದರೆ ತುಮಕೂರಿನಲ್ಲಿ ನಾವು ನೋಡಿದ್ದೇವೆ. ಈ ಕಡೆ ಒಂದು ದರ್ಗಾ ಇದೆ ಎಂದು ಹೇಳಿಕೆ ಕೊಟ್ಟಿದ್ದರು. ಈ ತರಹ ಎಲ್ಲಾ ಕಡೆ ಯಾವ ರಸ್ತೆ ಪಕ್ಕದಲ್ಲಿ ಮಾರ್ಜಿನ ಇರುತ್ತದೆ ಅಲ್ಲಿ ಅಂಗಡಿ ಕಟ್ಟುತ್ತಾರೆ. ದರ್ಗಾ ಇದ್ದರೆ ಗುಡಿ ಕಟ್ಟುವುದು, ಗುಡಿ ಇದ್ದರೆ ದರ್ಗಾ ಕಟ್ಟುವುದು ಇದು ನಡೆಯುತ್ತದೆ. ತಮ್ಮ ವ್ಯಾಖ್ಯಾನದಲ್ಲಿ ರೋಡ್ ಎಂದರೆ ಈ ರೋಡ್ ಪಕ್ಕದಲ್ಲಿ ಇರತಕ್ಕಂಥ ಫುಟ್‌ಪಾತ್ ಸೇರುತ್ತದೆಯೋ ಹೇಗೆ ? ಈ ಡ್ಯಾಮೇಜ್ ಎಂದು ಹೇಳಿದರೆ ಅಥವಾ ಈ ಅಬ್‌ಸ್ಟ್ರಾಕ್ಷನ್ ಆದರೆ ಅದು ಫುಟ್‌ಪಾತ್‌ನಲ್ಲಿ ನಡೆಯುವ ಅಬ್‌ಸ್ಟ್ರಾಕ್ಷನ್ ಬರುತ್ತದೆಯೋ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಇದು ಫುಟ್‌ಪಾತ್‌ಗೆ ಸಂಬಂಧಿಸುವುದಿಲ್ಲ. ರಸ್ತೆಗಳ ಇಕ್ಕಡೆಗಳಲ್ಲಿ ಕಟ್ಟಡ ಕಟ್ಟಬೇಕಾದರೆ ಅನುಮತಿಯನ್ನು ಪಡೆಯದೇ ಕಟ್ಟಿರುವ ಅನೇಕ ಉದಾಹರಣೆಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಅದಕ್ಕಾಗಿ ಕಾನೂನಿನಲ್ಲಿ ತಿದ್ದುಪಡಿಯನ್ನು ತರಬೇಕಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಪಿ.ಡಬ್ಲ್ಯೂ.ಡಿ. ರೋಡ್ ಎಷ್ಟು ಅಗಲ ಎಷ್ಟು ಅಡಿ ಇರಬೇಕು ಎಂಬುದನ್ನು ಸ್ವಲ್ಪ ಹೇಳಿ.

ಶ್ರೀ ಸಿ.ಎಂ. ಉದಾಸಿ : ಬೇರೆ ಬೇರೆ ರೋಡಿಗೆ ಬೇರೆ ಬೇರೆ ಅಳತೆ ಇರುತ್ತದೆ. ಕೆಲವು ಕಡೆ 180 ಅಡಿ ಇರುತ್ತದೆ, ಕೆಲವು ಕಡೆ 120 ಇರುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನೂರಿಪ್ಪತ್ತೇ ಆಗಲಿ, ನೂರೇ ಆಗಲಿ, ಆ ಜಾಗದಲ್ಲಿ ಎನ್‌ಕ್ರೋಚ್ ಮಾಡಿಕೊಳ್ಳಬಾರದು. ಅಲಿ ಯಾವುದೇ ದೇವಸಾನವನ್ನು, ದರ್ಗಾ ಹೋಟೇಲು ಯಾವುದನ್ನೂ

ಕಟ್ಟಬಾರದು ಎನ್ನತಕ್ಕಂಥ ಒಂದು ಕಾನೂನನ್ನು ತನ್ನಿ. ಅದು ಬಿಟ್ಟುಬಿಟ್ಟು ಫುಟ್‌ಪಾತ್ ಇದಕ್ಕೆ ಸಂಬಂಧ ಬರುವುದಿಲ್ಲವೆಂದರೆ ರೋಡ್ ಪಕ್ಕದಲ್ಲಿ ಅಂಗಡಿ ಮಾಡಿಕೊಳ್ಳಬಹುದಾ?

ಶ್ರೀ ಸಿ.ಎಂ. ಉದಾಸಿ : ಫುಟ್‌ಪಾತ್‌ನಲ್ಲಿ ಓಡಾಡುವವರಿಗೆ ಇದು ಸಂಬಂಧ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ರೋಡ್ ಎಂದರೆ ಏನು?

ಶ್ರೀ ಸಿ.ಎಂ. ಉದಾಸಿ : ಎಷ್ಟೋ ರಸ್ತೆಗಳು ಬೇರೆ ಬೇರೆ ಇರುತ್ತವೆ. ರಾಜ್ಯ ಹೆದ್ದಾರಿಗಳು ಬರುತ್ತವೆ, ರಾಷ್ಟ್ರೀಯ ಹೆದ್ದಾರಿಗಳು ಬೇರೆ.

ಶ್ರೀ ಕಾಗೋಡು ತಿಮ್ಮಪ್ಪ : ರೋಡ್ ಎಂದರೆ ಇನ್‌ಕ್ಲೂಡಿಂಗ್ ಫುಟ್‌ಪಾತ್ ಅಲ್ಲವೇನು?

ಶ್ರೀ ಸಿ.ಎಂ. ಉದಾಸಿ : ಫುಟ್‌ಪಾತನ್ನು ಹೊರತುಪಡಿಸಿ...

ಶ್ರೀ ಕಾಗೋಡು ತಿಮ್ಮಪ್ಪ : ಇಷ್ಟು ಇನ್ವೆಸ್ಟ್‌ಮೆಂಟ್ ಮಾಡಿ ರಸ್ತೆಗಳನ್ನು ಏಕೆ ಮಾಡುವುದಕ್ಕೆ ಹೋಗುತ್ತೀರಿ?

1.50 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೇನೂ ಭಯ ಇಲ್ಲ. ಅನೇಕ ಜನ್ಯೈಯನ್ ಡಿಮ್ಯಾಂಡ್‌ಗೋಸ್ಕರ ನಾಳೆ ವಿರೋಧ ಪಕ್ಷದವರೇ ಅಲ್ಲ, ಅವರು ಬಂದರೂ ಚಳುವಳಿ ಮಾಡಬೇಕಾಗುತ್ತದೆ. ಈಗ ಅವರೇನೂ ಕೇಂದ್ರದಲ್ಲಿ ಬಂದಿದ್ದಾರೆ, ಅವರಿಗೆ ಚಳುವಳಿಯ ಅಗತ್ಯ ಇಲ್ಲ. ನಮ್ಮಲ್ಲಿ ಅವರೂ ಬಂದರೂ ನಿಮ್ಮನ್ನೂ ಕೂಡ ಒಳಗೆ ಹಾಕುತ್ತಾರೆ.

ಅಧ್ಯಕ್ಷರು : ಸದುದ್ದೇಶದಿಂದ ಈ ವಿಧೇಯಕ ತಂದಿದ್ದಾರೆ, ತಾವೆಲ್ಲರೂ ಸಹಕಾರ ಕೊಡಿ.

ಗೊಂದಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೇ ರೀತಿ ಪಾಸ್ ಮಾಡಿದರೆ ನಡೆಯುತ್ತದೆ ಎಂದರೆ, ನಾಳೆ ಚಳುವಳಿ ಮಾಡಿದಾಗ, ಇವರಿಗೆ ಮೂರು ವರ್ಷ ಹಾಕಿದರೆ, ಯಾರೂ ಕೇಳುವವರು ಇರುವುದಿಲ್ಲ ಎಂದು ಹೇಳಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದನ್ನು ಪಾಸ್ ಮಾಡುವುದಕ್ಕೆ ಬಿಡದೇ ಇರುವವರಲ್ಲಿ ಮೊದಲನೆಯವರು ನಾವು. ಇದನ್ನೇ ಅವರು ಪಾಸ್ ಮಾಡಿದರೆ, ನಾವು ನಿಮಗಿಂತ ಮುಂಚೆಯೇ ಧರಣಿ ಕುಳಿತುಕೊಳ್ಳುತ್ತೇವೆ. ನೀವು ಮಾಡುವುದಕ್ಕೆ ಅವರು ಎನ್‌ಕರೇಜ್ ಮಾಡುತ್ತಾರೆ ಅಷ್ಟೆ. ಯಾವ ಕಾರಣಕ್ಕೂ ಈ ಬಿಲ್‌ಪಾಸ್ ಮಾಡುವುದಕ್ಕೆ ನಾವು ಬಿಡುವುದಿಲ್ಲ. ಅವರು ಚಳುವಳಿಯನ್ನು ಬಿಟ್ಟು ಎಂದು ಮಾಡಲಿ.

ಶ್ರೀ ಸಿ.ಎಂ. ಉದಾಸಿ : ಚಳುವಳಿಗಳನ್ನು ಹೊರತು ಪಡಿಸಿ ಎಂದು ಮಾಡಲಾಗುವುದು.

ಶ್ರೀ ಜೆ.ಎ. ಶ್ರೀರಾಮರೆಡ್ಡಿ : ಚಳುವಳಿಗಳನ್ನು ಹೊರತು ಪಡಿಸಿ, 10 ವರ್ಷ ಜೈಲಿಗೆ ಹಾಕುತ್ತೇವೆಂದು ಹೇಳಿ, ನಮ್ಮದೇನೂ ತಕರಾರು ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ನನಗೊಂದು ಕ್ಲಾರಿಫಿಕೇಷನ್ ಬೇಕು. Punishment for nuisance to Highways. Is it not redundant? ಈಗಾಗಲೇ ಕಾನೂನು ಇದೆ. ಕಾನೂನು ಇರುವಾಗ ಈ 19ಬಿ ತರುವಂಥ ಅಗತ್ಯ ಏನಿದೆ?

ಅಧ್ಯಕ್ಷರು : ಅದಕ್ಕೆ ರೆಗ್ಯುಲರ್ ಪೋಲೀಸ್ ಕಾಯಿದೆಯಲ್ಲಿ ನ್ಯೂಸೆನ್ಸ್‌ಗೆ, ಟ್ರೆಸ್ ಪಾಸ್‌ಗೆ ಇಟ್ಟುಕೊಂಡಿದ್ದೇವೆ. This is a special order coming into force only to ensure safety on the Highways.

SRI H. SHIVAPPA : Highways, whether it includes National Highways?

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲರ ಭಾವನೆಗಳನ್ನು ಅರಿತುಕೊಂಡು ಚಳುವಳಿಗಳನ್ನು ಹೊರತುಪಡಿಸಿ ಎಂಬ ಪದವನ್ನು ತೆಗೆದುಕೊಂಡು ಬನ್ನಿ. ಈ ಬಿಲ್ ಪಾಸ್ ಮಾಡೋಣ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1997ನೇ ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ಕ್ಕೆ ತಿದ್ದುಪಡಿ :

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಖಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"19-ಬಿ ಚಳುವಳಿಗಳನ್ನು ಹೊರತು ಪಡಿಸಿ, ಎಂಬುದು ಮತ್ತು 5 ವರ್ಷ ಎನ್ನುವ ಬದಲಾಗಿ 1 ವರ್ಷವೆಂದು ತಿದ್ದುಪಡಿ ಮಾಡಿಕೊಳ್ಳುವುದು"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "19-ಬಿ ನಲ್ಲಿ ಚಳುವಳಿಗಳನ್ನು ಹೊರತುಪಡಿಸಿ ಎಂಬುದು ಮತ್ತು 5 ವರ್ಷ ಎನ್ನುವ ಬದಲಾಗಿ 1 ವರ್ಷವೆಂದು ತಿದ್ದುಪಡಿಮಾಡಿಕೊಳ್ಳುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ" (ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ``1997ನೇ ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,"1997ನೇ ಕರ್ನಾಟಕ ಹೆದ್ದಾರಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ, ವ್ಯವಹಾರ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೇ, "1997ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೇ, ರೈತ ತಂದಂಥ ಪದಾರ್ಥಗಳಿಗೆ, ವ್ಯಾಪಾರವಾದ ಮೇಲೆ ನಿಧಾನವಾಗಿ ಅವನಿಗೆ ಹಣವನ್ನು ಕೊಡುತ್ತಾ ಇದ್ದರು. ಅದಕ್ಕೋಸ್ಕರವಾಗಿ ಆ ಹಣವನ್ನು ಮೊದಲೇ ನಮ್ಮ ಸಮಿತಿಗೆ ಕಟ್ಟಿ, ತಕ್ಷಣವೇ ಅವರಿಗೆ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡತಕ್ಕಂಥಾದ್ದೇ ಇದರ ಮುಖ್ಯ ಉದ್ದೇಶ. ಹಿಂದೆ ಟ್ರೇಡರ್ಸ್‌ಗೆ ಮಾತ್ರ